ಶ್ರೀ ಡಿ.ಎ ಚಿನ್ನಪ್ಪ:- ಮಾನ್ಯ ಅಧ್ಯಕ್ಷರೇ, ನಮ್ಮ ರಿಪೋರ್ಟ್‌ನಲ್ಲಿ ಹೇಳಿದ ಹಾಗೆ ಹೆಲ್ಮೆಟ್ ಹಾಕದಿದ್ದರೆ ಎಷ್ಟು ಜನ ಸತ್ತಿದ್ದಾರೆ ಎಷ್ಟು ಜನ ನಿಮ್ಮಾನ್ಸ್‌ಗೆ ಸೇರಿದ್ದಾರೆ, ಎಷ್ಟು ಜನರಿಗೆ ಹಿಂದೆ ಕುಳಿತುಕೊಂಡವರಿಗೆ ಗಾಯ ಆಗಿದೆ, ಎಷ್ಟು ಜನ ಗಾಯಗಳಿಂದ ಕಷ್ಟಪಡುತ್ತಿದ್ದಾರೆ, ಹೆಲ್ಮೆಟ್ ಹಾಕದವರು ಹೆಲ್ಮೆಟ್ ಹಾಕುವುದರಿಂದ ಎಷ್ಟು ಪರ್ಸೆಂಟೇಜ್ ಕಡಿಮೆ ಆಗಿದೆ ಎಷ್ಟು ಜನರ ಜೀವ ಉಳಿದಿದೆ ಎಷ್ಟು ಜನರಿಗೆ ಗಾಯ ಕಡಿಮೆ ಆಗಿದೆ, ಅದರಿಂದ ಎಷ್ಟು ಜನರಿಗೆ ತೊಂದರೆ ಆಗಿದೆ, ಇದನ್ನೆಲ್ಲಾ ನಾವು ನೋಡಬೇಕಾಗಿದೆ. ಕೆಲವು ಸಾರಿ ಸಾರ್ವಜನಿಕರಿಗೆ ತೊಂದರೆ ಆಗುತ್ತದೆ. ಆದರೆ ಜೀವ ತೊಂದರೆಗಿಂತ ಬಹಳಷ್ಟು ಪ್ರಾಮುಖ್ಯವಾದುದು. ಒಬ್ಬನ ಜೀವ ಉಳಿದರೆ ಅದರಿಂದ ಎಷ್ಟು ಅನಾಹುತಗಳನ್ನು ತಪ್ಪಿಸಬಹುದೆಂಬುದನ್ನು ಯೋಚನೆ ಮಾಡಬೇಕು. ಈ ದೃಷ್ಟಿಯಿಂದ ನಾವು ನೋಡಿದಾಗ ಹೆಲ್ಮೆಟ್ ಇರತಕ್ಕಂಥಾದ್ದು ಒಳ್ಳೆಯದು ಅಂತ ನಮ್ಮ ಅಭಿಪ್ರಾಯ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ತೆಗೆದುಕೊಳ್ಳಲು ನಾನು ಅವರಿಗೆ ಹೇಳುತ್ತೇನೆ.

ದ.ಅ ವಿಷಯ:- ಶಿವಮೊಗ್ಗ ಜಿಲ್ಲೆಯಲ್ಲಿರುವ ಪ್ರಾಥಮಿಕ ಶಾಲಾ ಗೌರವ ಶಿಕ್ಷಕರುಗಳನ್ನು ಖಾಯಂಗೊಳಿಸುವ ಬಗ್ಗೆ.

ಶ್ರೀ ಕರಿಯಣ್ಣ(ಹೊಳೆ ಹೊನ್ನೂರು):- ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾಗೌರವ ಶಿಕ್ಷಕರುಗಳನ್ನು ಖಾಯಂಗೊಳಿಸಲು ಕೋರಿ ಅಮರಣಾಂತರ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಬಗ್ಗೆ ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ. ನಾಗಮ್ಮ ಸಿ.ಕೇಶವಮೂರ್ತಿ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೇ, ಬೆಂಗಳೂರು ಗ್ರಾಮಾಂತರ, ಕೋಲಾರ, ಶಿವಮೊಗ್ಗ ಮತ್ತು ಬಳ್ಳಾರಿ ಜಿಲ್ಲಾ ಪಂಚಾಯತ್‌ಗಳು 3,837 ಗೌರವ ಧನ ಶಿಕ್ಷಕರನ್ನು ನೇಮಕ ಮಾಡಿಕೊಂಡಿರುತ್ತಾರೆ. ಸರ್ವೋಚ್ಚ ನ್ಯಾಯಾಲಯವು ದಿನಾಂಕ 10-7-91ರ ಆದೇಶದಲ್ಲಿ ಸಾಮಾನ್ಯ ನೇಮಕಾತಿಯನ್ನು ಮುಂದುವರಿಸಲು ಹಾಗೂ ಈ ಗೌರವ ಧನ ಶಿಕ್ಷಕರಿಗೂ ಸಹ ಆದರಲ್ಲಿ ಅವಕಾಶ ಕಲ್ಪಿಸಲು ನಿರ್ದೇಶನ ನೀಡಿದೆ. ಈ ಶಿಕ್ಷಕರು ಸಲ್ಲಿಸಿದ ಸೇವಾ ಅವಧಿಗೆ ಸೂಕ್ತ ಮಾನ್ಯತೆ ನೀಡುವ ಒಂದು ತತ್ವವನ್ನು ಸಹ ಅಳವಡಿಸಲು ಸೂಚನೆ ನೀಡಿದ್ದಿತು. ನ್ಯಾಯಾಲಯದ ಈ ಆದೇಶದನ್ವಯ ಸದರಿ ಶಿಕ್ಷಕರು ಪೂರ್ತಿಗೊಳಿಸಿದ ಅವರ ಪ್ರತಿಯೊಂದು ಸೇವಾ ವರ್ಷಕ್ಕೆ ಶೇಕಡ 0.50 ಕೃಪಾಂಕ ನೀಡುವುದು ಸೂಕ್ತವೆಂದು ಭಾವಿಸಿ ಪ್ರಾಥಮಿಕ ಶಿಕ್ಷಕರ ವಿಶೇಷ ನೇಮಕಾತಿ ನಿಯಮಾವಳಿ ಹಾಗೂ ಸಾಮಾನ್ಯ ನೇಮಕಾತಿ ನಿಯಮಾವಳಿಗಳಿಗೆ ಸೂಕ್ತ ತಿದ್ದುಪಡಿ ಮಾಡಿ ಅವರು ಜಿಲ್ಲಾ ಪಂಚಾಯತ್‌ಗಳಲ್ಲಿ ಸಲ್ಲಿಸಿದ ಸೇವೆಯ ಪ್ರತಿ ವರ್ಷಕ್ಕೆ ಶೇಕಡ 0.50 ಕೃಪಾಂಕ ನೀಡುವ ಅವಕಾಶ ಕಲ್ಪಿಸಿದೆ.

ಸಚಿವ ಸಂಪುಟವು ಇತ್ತೀಚೆಗೆ ಪ್ರಾಥಮಿಕ ಶಿಕ್ಷಕರ ಸಾಮಾನ್ಯ ನೇಮಕಾತಿ ನಿಯಮಾವಳಿಗಳಿಗೂ ಸಹ ಇಂತಹ ತಿದ್ದುಪಡಿ ನೀಡಿ ಶೇಕಡ 0.50 ರಷ್ಟು ಕೃಪಾಂಕ ನೀಡುವ ಪ್ರಸ್ತಾವನೆಗೆ ಅನುಮೋದನೆ ನೀಡಿದೆ. ಈ ರೀತಿ ನೀಡುವ ಕೃಪಾಂಕವು ಗರಿಷ್ಠ 1.5ಕ್ಕೆ ಮಿತಿಗೊಳಿಸಲು ನಿರ್ಧರಿಸಿದೆ.

ಸಂಬಂಧಿಸಿದಂತೆ, ಸರ್ವೋಚ್ಚ ನ್ಯಾಯಾಲಯವು ಈ ಶಿಕ್ಷಕರ ಸೇವಾ ಅವಧಿಯನ್ನು ಗಮನಕ್ಕೆ ತೆಗೆದುಕೊಂಡು ಯಾವುದೇ ಮಿತಿಗೊಳಪಡಿಸದೆ ಕೃಪಾಂಕದ ತತ್ವವನ್ನು ಅಳವಡಿಸುವಂತೆ ಸೂಚಿಸಿರುವ

ಅಂಶವನ್ನು ಗಮನಿಸಬಹುದು. ಆದರೆ ಈಗ ನೀಡಿರುವ ಕೃಪಾಂಕವು ಬಹಳ ಕಡಿಮೆ ಇದೆ. ಆದಾಗ್ಯೂ ಈಗಾಗಲೇ ಜರುಗಿರುವ ಎರಡು ನೇಮಕಾತಿಗಳಿಂದ ಕೇವಲ ಕೆಲವೇ ಶಿಕ್ಷಕರು ಮಾತ್ರ ಆಯ್ಕೆಗೊಂಡಿರುತ್ತಾರೆ. ಈ ಗೌರವ ಧನ ಶಿಕ್ಷಕರು ಬಹಳ ಕಡಿಮೆ ಸಂಭಾವನೆಗೆ ಕೆಲಸ ನಿರ್ವಹಿಸುತ್ತಿದ್ದು ಇವರನ್ನು ನ್ಯಾಯಾಲಯದ ಆದೇಶದ ರೀತಿಯಂತೆ ಕೆಲಸದಿಂದ ತೆಗೆದುಹಾಕುವಂತಿಲ್ಲ. ಆದ್ದರಿಂದ, ಆ ಸಮಸ್ಯೆ ಬಗ್ಗೆ ಒಂದು ನೈಜ ಧೋರಣೆ ಹೊಂದಬೇಕಾಗಿದೆ. ಸದರಿ ಶಿಕ್ಷಕರು ತಮ್ಮನ್ನು ಖಾಯಂಗೊಳಿಸಲು ಇತ್ತೀಚೆಗೆ ಹಲವಾರು ಜಿಲ್ಲೆಗಳಲ್ಲಿ ಮುಷ್ಕರ ಮತ್ತು ಧರಣಿ ಪ್ರಾರಂಭಿಸಿರುತ್ತಾರೆ.

ಮೇಲೆ ತಿಳಿಸಿದ ಹಿನ್ನೆಲೆಯಲ್ಲಿ ಗೌರವಧನ ಶಿಕ್ಷಕರಿಗೆ ಅವರು ಸೇವೆ ಸಲ್ಲಿಸಿದ ಪ್ರತಿ ವರ್ಷಕ್ಕೆ ಈಗ ನೀಡುತ್ತಿರುವ ಶೇಕಡ 0.50ಕ್ಕೆ ಬದಲು ಶೇಕಡ 2.00 ಕೃಪಾಂಕ ನೀಡುವ ಹಾಗೂ ಯಾವುದೇ ಗರಿಷ್ಠ ಮಿತಿಗೆ ಒಳಪಡಿಸದೆ ಈ ಕೃಪಾಂಕ ನೀಡುವುದನ್ನು ಪರಿಗಣಿಸಲಾಗುವುದು.

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೇ, ಈಗ್ಗೆ ಒಂದು ತಿಂಗಳಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು 217 ಜನ ಗೌರವ ಶಿಕ್ಷಕರು ಉಪವಾಸ ಸತ್ಯಾಗ್ರಹವನ್ನು ಏನು ಮಾಡುತ್ತಿದ್ದಾರೆ, ಅದರ ಬಗ್ಗೆ ತಾವು ವಿವರಣೆ ಕೊಡಲಿಲ್ಲ. ತಾವು ಇಡೀ ರಾಜ್ಯದ ಬಗ್ಗೆ ಹೇಳಿದ್ದೀರಿ. ಈಗ ಅವರು ಅಮರಣಾಂತರ ಉಪವಾಸ ಹೂಡಿ ಎಷ್ಟೋ ಜನ ಆಸ್ಪತ್ರೆಗಳಿಗೂ ಸಹ ಸೇರಿದ್ದಾರೆ. ಈಗ ಅವರು ಎಷ್ಟು ವರ್ಷಗಳಿಂದ ಸೇವೆ ಮಾಡಿದ್ದಾರೆ ಎನ್ನತಕ್ಕಂಥ ವಿವರಣೆ ಕೊಡಲಿಲ್ಲ. ತಮಗೆ ತಿಳಿದಂತೆ ಈಗ 5 ವರ್ಷಗಳಿಂದ ಅವರು ಸೇವೆ ಮಾಡುತ್ತಾ ಬಂದಿದ್ದಾರೆ. ಎರಡೂವರೆ ವರ್ಷಗಳ ಕಾಲ ಕೇವಲ 300 ರೂಪಾಯಿಗಳ ಸಂಬಳದಲ್ಲೂ ಎರಡೂವರೆ ವರ್ಷಗಳಿಂದ ಈಚೆಗೆ 500 ರೂಪಾಯಿ ಸಂಬಳದಲ್ಲೂ ಅವರು ಸೇವೆ ಮಾಡುತ್ತಾ ಬಂದಿದ್ದಾರೆ. ಈಗಾಗಲೇ ರಾಜ್ಯದಲ್ಲಿ ತಾವು 3837 ಜನ ಇಂತಹ ಗೌರವ ಶಿಕ್ಷಕರು ಇದ್ದರು ಅಂತ ಹೇಳಿದ್ದೀರಿ. ಈಗ ಇದು ಕಡಿಮೆ ಆಗಿ ಸುಮಾರು ಎರಡು ಸಾವಿರ ಜನಗೌರವ ಶಿಕ್ಷಕರು ಉಳಿದಿದ್ದಾರೆ. ತಾವು ಮೊನ್ನೆ ಒಂದು ನೀತಿಯನ್ನು ಅನುಸರಿಸಿ ಪ್ರಕಟಣೆ ಮಾಡಿದ್ದೀರಿ ಏನೆಂದರೆ ಯಾರು ನಿವೃತ್ತಿಯಾದ ಉಪಾಧ್ಯಾಯರು ಇರುತ್ತಾರೋ ಯಾವ ಶಾಲೆಯಲ್ಲಿ ಕೊರತೆ ಇದೆಯೋ ಅಲ್ಲಿ ಅವರನ್ನು ಮತ್ತೆ ಉದ್ಯೋಗಕ್ಕೆ ತೆಗೆದುಕೊಂಡರೆ ಒಂದೂವರೆ ಸಾವಿರ ರೂಪಾಯಿಗಳಿಂದ ಸಾವಿರದ ಎಂಟುನೂರುರೂಪಾಯಿಗಳ ವರೆಗೂ ಸಂಬಳ ಕೊಡುತ್ತೇವೆಂದು ಹೇಳಿದ್ದೀರಿ. ಆದೇ ಯುವಕರಾಗಿರತಕ್ಕಂಥ ಇವರು 5 ವರ್ಷಗಳಿಂದ ಕೇವಲ 300 ರೂಪಾಯಿಗಳಿಂದ 500ರೂಪಾಯಿಗಳವರೆಗೂ ಸಂಬಳ ತೆಗೆದುಕೊಂಡು ಸೇವೆ ಮಾಡಿದವರನ್ನು ಗಮನಿಸದೇ ರಿಟೈರ್ಡ್ ಆದವರಿಗೆ ಸಾವಿರದ ಎಂಟುನೂರು ರೂಪಾಯಿ ಸಂಬಳ ಕೊಡುತ್ತೇವೆಂದು ಹೇಳಿ ಸರ್ಕಾರ ಪ್ರಕಟಣೆ

5.05 ಪಿ.ಎಂ.

ಮಾಡಿರುವುದು ಯಾವ ನ್ಯಾಯ? ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಏನಾಗಿದೆ ಅಂದರೆ, ಏನಾದರೂ ಒಂದು ನೇಮಕಾತಿಯನ್ನು ಮಾಡಿಕೊಳ್ಳಬೇಕಾದರೂ ಕೂಡ ಆಗ ಈ 217 ಜನರನ್ನು ರೋಸ್ಟರ್ ಸಿಸ್ಟಮ್‌ನ್ನು ಅನುಸರಿಸಿಯೇ ನೇಮಕ ಮಾಡಿಕೊಂಡಿದ್ದರು. ಕಳೆದ ವರ್ಷ ನೀವು 300 ಚಿಲ್ಲರೆ ಜನರನ್ನು ಹೊಸತಾಗಿ ರಿಕ್ರೂಟ್‌ಮೆಂಟ್ ಮಾಡಿದ್ದೀರಿ. ಆದರಲ್ಲಿಯೇ ಈ 217 ಜನರನ್ನು ಅಬ್‌ಸಾರ್ಬ್ ಮಾಡಿಕೊಂಡಿದ್ದರೆ ಈ ಪ್ರಶ್ನೆಯೇ ಉದ್ಭವವಾಗುತ್ತಿರಲಿಲ್ಲ. ಎರಡನೇದಾಗಿ ಹೇಳುವುದಾದರೆ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ 1200ಜನ ಉಪಾಧ್ಯಾಯರ ಕೊರತೆ ಇದೆ. ಇದರಲ್ಲಿ

ಉರ್ದು ಮತ್ತು ಹಿಂದಿ ಟೀಚರ್‌ಗಳಂತೂ ಇಲ್ಲವೇ ಇಲ್ಲ. ನೀವು ಹಿಂದಿಯನ್ನು ಕಡ್ಡಾಯ ಮಾಡಿದ್ದೀರಿ. ಆದರೆ ಹಿಂದಿ ಉಪಾಧ್ಯಾಯರಿಲ್ಲ. ಉರ್ದು ವಿಷಯ ಇಟ್ಟಿದ್ದೀರಿ; ಉರ್ದು ಉಪಾಧ್ಯಾಯರು ಇಲ್ಲ. ಈ ಗೌರವ ಶಿಕ್ಷಕರೆಂದು ಏನು ಹಿಂದೆ ನೇಮಕ ಮಾಡಿಕೊಂಡಿದ್ದೀರಿ, ಅದರಲ್ಲಿ ಉರ್ದು ಟೀಚರ್ಸ್ ಕೂಡ ಇದ್ದಾರೆ. ಇವರೆಲ್ಲರೂ ಇವೊತ್ತು ಉಪವಾಸ ಕುಳಿತಿರುವುದರಿಂದ ಮತ್ತು ನಮ್ಮಲ್ಲಿ 1200 ಜನ ಟೀಚರ್ಸ್ ಕೊರತೆ ಇರುವುದರಿಂದ, ಅನೇಕ ಶಾಲೆಗಳು ನಡೆಯದೇ ಬೀಗ ಹಾಕತಕ್ಕಂಥ ಪರಿಸ್ಥಿತಿಯು ಬಂದಿದೆ. ಅವರು ಯಾವ ಇಲಾಖೆಯಿಂದಲೂ ಗಣಿಸಲ್ಪಟ್ಟಿಲ್ಲ. ಎಜುಕೇಷನ್ ಇಲಾಖೆಯವರು ಈ ಬಗ್ಗೆ ಒಂದು ವರದಿಯನ್ನು ಕೂಡ ಸರಕಾರಕ್ಕೆ ಕೊಟ್ಟಿಲ್ಲ. ಜಿಲ್ಲಾಧಿಕಾರಿಗಳು ಕೇಳಿಲ್ಲ, ಉಪವಾಸ ಕುಳಿತವರ ಪ್ರಾಣ ಹೋಗುತ್ತದೆ ಎನ್ನುವಾಗ ಅವರನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಸೇರಿಸುತ್ತಾರೆ, ಅಲ್ಲಿ ಔಷಧಿ ಸಹ ಇಲ್ಲ. ಹೀಗೆ ಐದು ವರ್ಷಗಳಿಂದ ಅವರು ಕೆಲಸ ಮಾಡಿಕೊಂಡು ಬಂದ ಕಾರಣ ನೀವು ಯಾವುದೇ ಕೃಪಾಂಕವನ್ನು ಅವರಿಗೆ ಕೊಡುವುದನ್ನು ಬಿಟ್ಟು ಅವರನ್ನು ಏಕಾಏಕಿಯಾಗಿ ಖಾಯಂಗೊಳಿಸಬೇಕು. ಯಾಕೆಂದರೆ ಕಂಟ್ರಾಕ್ಟ್ ಬೇಸಿಸ್‌ನಲ್ಲಿ ಕೆಲಸ ಮಾಡುತ್ತಿದ್ದವರನ್ನು ಯಾವುದೇ ರೋಸ್ಟರ್ ಸಿಸ್ಟಂನ್ನು ಅನುಸರಿಸದೆ ಒಂದೇ ಹಂತದಲ್ಲಿ ಖಾಯಂಗೊಳಿಸಿದ್ದೀರಿ. ಇವರು ಎರಡು ಸಾವಿರ ಜನರಿರುವುದರಿಂದ ವರ್ಷಕ್ಕೆ ನೀವು ಎಂಟು ಸಾವಿರ ಜನರನ್ನು ತೆಗೆದುಕೊಳ್ಳಬೇಕೆಂಬ ನಿಯಮವನ್ನು ಮಾಡುತ್ತಿರುವುದರಿಂದ ಒಂದೇ ಹಂತದಲ್ಲಿ ಇವರನ್ನು ಖಾಯಂಗೊಳಿಸಬೇಕು. ಒಂದು ಪಕ್ಷ ಇವರನ್ನು ಖಾಯಂಗೊಳಿಸಲು ಆಗಿಲ್ಲವೆಂದರೆ, ಕಾಂಟ್ರಾಕ್ಟ್ ಬೇಸಿಸ್‌ನವರಿಗೆ ಏನು ನಿಯಮವನ್ನು ಅನುಸರಿಸಿದ್ದೀರೋ, ಆ ಒಂದು ಸಂಬಳವನ್ನಾದರೂ ಕೂಡ ಇವರಿಗೆ ನಿಗದಿ ಮಾಡಿದರೆ ಅವರು ಜೀವನ ಮಾಡಲು ಆಗುತ್ತದೆ. ಮಿನಿಮಮ್ ವೇಜಸ್ ಆಕ್ಟ್‌ಗಿಂತ ಕಡಿಮೆ ಸಂಬಳ ತೆಗೆದುಕೊಂಡು ಹಳ್ಳಿಗಾಡಿನಲ್ಲಿ ಇವರು ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಇವರುಗಳನ್ನು ಖಾಯಂ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಸ್ವಾಮಿರಾವ್(ಹೊಸನಗರ):- ಸನ್ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳ ಹಿಂದೆ ಯಾವ ಶಾಲೆಯ ಬಾಗಿಲೂ ತೆರೆದಿರಲಿಲ್ಲ. ಆ ಸಂದರ್ಭದಲ್ಲಿ ಜಿಲ್ಲಾಪರಿಷತ್‌ನವರು ಮತ್ತು ನಾವೆಲ್ಲರೂ ಕುಳಿತು ಗೌರವಧನ ಎಂದು ಸುಮಾರು 300 ರೂಗಳನ್ನು ಕೊಡುವುದಕ್ಕೆ ಒಪ್ಪಿ ನಮ್ಮ ಜಿಲ್ಲೆಯಲ್ಲಿ 200 ಚಿಲ್ಲರೆ ಮತ್ತು ಇಡೀ ರಾಜ್ಯದಲ್ಲಿ ಎರಡೂವರೆ ಸಾವಿರ ಜನರ ನೇಮಕಾತಿ ಆಯಿತು. ಅವರುಗಳು ಐದು ವರ್ಷಗಳಿಂದ ಕೆಲಸ ಮಾಡುತ್ತಾ ಇದ್ದಾರೆ. ಅವರು ತಮ್ಮನ್ನು ಖಾಯಂ ಮಾಡಬೇಕೆಂದು ಒತ್ತಡ ಹಾಕಿ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಅದರಲ್ಲಿ ಬಹುತೇಕ ಅರ್ಧಕ್ಕಿಂತಲೂ ಹೆಚ್ಚು ಭಾಗ ಮಹಿಳೆಯರು ತಮ್ಮ ಚಿಕ್ಕಮಕ್ಕಳನ್ನು ಎತ್ತಿಕೊಂಡು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರು ಏನು ಹೇಳಿದರೂ ಕೂಡ ಸತ್ಯಾಗ್ರಹವನ್ನು ನಿಲ್ಲಿಸುತ್ತಾ ಇಲ್ಲ. ನಾವುಗಳು ಹೋಗಿ ನೀವು ಸತ್ಯಾಗ್ರಹವನ್ನು ನಿಲ್ಲಿಸಿ. ನಿಮ್ಮ ಬೇಡಿಕೆಯನ್ನು ಈಡೇರಿಸಲು ನಾವು ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡುತ್ತೇವೆಂದು ಹೇಳಿದರೂ ಕೂಡ ಅವರು ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಿಲ್ಲ. ಪೋಲೀಸರು ಈಗಾಗಲೇ ಅವರು ಸ್ಥಿತಿಯನ್ನು ನೋಡಿ ಅನೇಕ ಜನರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಹೀಗೆ ಏನಾದರೂ ಒಂದು ಆಶ್ವಾಸನೆ ಬರುವತನಕ ನಾವು ನಿಲ್ಲಿಸುವುದಿಲ್ಲ ಎಂಬ ಹಠವನ್ನು ಹಿಡಿದಿದ್ದಾರೆ. ಆದ್ದರಿಂದ ಕಾನೂನು ರೀತ್ಯಾ ಇವರನ್ನು ಖಾಯಂ

ಮಾಡಬೇಕಾಗುತ್ತದೆ. ಇವರನ್ನು ನೇಮಕ ಮಾಡಿಕೊಳ್ಳುವಾಗ ಕೂಡ ರೋಸ್ಟರ್ ಪದ್ಧತಿಯನ್ನು ಅನುಸರಿಸಿ ನೇಮಕ ಮಾಡಿದ್ದಾರೆ. ಈಗಾಗಲೇ ಅವರು ಐದು ವರ್ಷ ಕೆಲಸ ಮಾಡಿದ್ದು ಸುಪ್ರೀಂ ಕೋರ್ಟ್‌ನ ಆಜ್ಞೆ ಕೂಡ ಅವರಿಗೆ ಅನುಕೂಲವಾಗಿದೆ. ಈಗ ರಾಜ್ಯದಲ್ಲಿ ಸುಮಾರು 10-20 ಸಾವಿರ ಜನ ಶಿಕ್ಷಕರು ಬೇಕಾಗಿದ್ದಾರೆ. ಆದ್ದರಿಂದ ಈಗಾಗಲೇ ಕೆಲಸ ಮಾಡುತ್ತಾ ಇರುವ ಮತ್ತು ಸತ್ಯಾಗ್ರಹವನ್ನು ಮಾಡುತ್ತಿರುವಂಥವರಿಗೆ ಖಾಯಂಗೊಳಿಸಿದರೆ ಅವರು ಬದುಕುತ್ತಾರೆ. ಇಲ್ಲದೇ ಹೋದರೆ ಅವರು ಸಾಯುತ್ತಾರೆ ಎಂದು ಕಟುವಾದ ಶಬ್ಧಗಳಲ್ಲಿ ಹೇಳಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ಒಂದು ಆಜ್ಞೆಯನ್ನು ಇವೊತ್ತು ಹೊರಡಿಸಬೇಕು, ಇಲ್ಲವಾದರೆ ಅವರು ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸುವುದಿಲ್ಲ. ಇಲ್ಲಿಗೂ ಕೂಡ ಬಂದು ಕಬ್ಬನ್ ಪಾರ್ಕ್‌ನಲ್ಲಿ ಉಪವಾಸ ಮಾಡುತ್ತಿದ್ದಾರೆ. ಇವರ ಸತ್ಯಾಗ್ರಹಕ್ಕೂ ಬೇರೆಯವರ ಸತ್ಯಾಗ್ರಹಕ್ಕೂ ವ್ಯತ್ಯಾಸವಿದೆ. ಬಹಳ ಜನ ಹೆಣ್ಣುಮಕ್ಕಳು ತಮ್ಮ ಮಕ್ಕಳನ್ನು ಇಟ್ಟುಕೊಂಡು ಕುಳಿತಿದ್ದಾರೆ, ಅವರಲ್ಲಿ ಗರ್ಭಿಣಿಯರೂ ಇದ್ದಾರೆ. ಡಿಸಿ ಕಾಂಪೌಂಡ್‌ನ ಮುಂದೆ ಉಪವಾಸದಿಂದ ಸಾಯುತ್ತಾ ಇದ್ದಾರೆ. ಆ ದೃಶ್ಯವನ್ನು ನೋಡುವುದಕ್ಕೆ ಆಗುವುದಿಲ್ಲ. ನಾನು ಮತ್ತು ಕರಿಯಣ್ಣನವರು ಹೋಗಿ ಅನೇಕ ಸಾರಿ ಅವರಲ್ಲಿ ಕೇಳಿಕೊಂಡಿದ್ದೇವೆ. ಆದರೂ ಅವರು ನಿಲ್ಲಿಸುತ್ತಾ ಇಲ್ಲ. ಸರಕಾರಕ್ಕೆ ಇದೊಂದು ಸಣ್ಣ ವಿಚಾರ. ಇಷ್ಟು ಜನರನ್ನು ನೇಮಕಾತಿ ಮಾಡಿಕೊಳ್ಳುವುದು ದೊಡ್ಡ ಕಷ್ಟದ ಕೆಲಸವೇನಲ್ಲವಾದ ಕಾರಣ ಅವರನ್ನು ಖಾಯಂಗೊಳಿಸುವಲ್ಲಿ ಈವೊತ್ತು ಆಜ್ಞೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್ ಈಶ್ವರಪ್ಪ(ಶಿವಮೊಗ್ಗ):- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರು ಕೊಟ್ಟಿರುವ ಉತ್ತರ ನೋಡಿದರೆ ಸಮಸ್ಯೆಯನ್ನು ಅವರು ಅರ್ಥಮಾಡಿಕೊಂಡಿಲ್ಲ ಎಂದು ನನಗನ್ನಿಸುತ್ತದೆ. ಈ ಗೌರವಶಿಕ್ಷಕರು ಬಹಳ ಕಡಿಮೆ ಸಂಭಾವನೆಗೆ ಕೆಲಸ ನಿರ್ವಹಿಸುತ್ತಿದ್ದು ಇವರನ್ನು ನ್ಯಾಯಾಲಯದ ಆದೇಶದ ರೀತಿಯಿಂದ ಕೆಲಸದಿಂದ ತೆಗೆದುಹಾಕುವಂತಿಲ್ಲ ಎಂದು ತುಂಬ ಸ್ಪಷ್ಟವಾಗಿ ಬರೆದಿದ್ದಾರೆ. ಮೊದಲನೆಯದಾಗಿ ಈ ಸರ್ಕಾರದಲ್ಲಿ 20 ಸಾವಿರ ಹುದ್ದೆಗಳು ಖಾಲಿ ಇವೆ, ಕಳೆದ ಅಕೆಡೆಮಿಕ್ ವರ್ಷದಲ್ಲೇ ಈ ಹುದ್ದೆಗಳನ್ನೆಲ್ಲಾ ಭರ್ತಿ ಮಾಡುತ್ತೇವೆಂದು ಹಿಂದಿನ ವಿಧಾನಸಭೆಯಲ್ಲೇ ನಮಗೆ ಆಶ್ವಾಸನೆ ಸಿಕ್ಕಿತ್ತು. ಆದಾದದನಂತರ ನೂರು ದಿನದ ಯೋಜನೆಯಲ್ಲೂ ಕೂಡ ಭರ್ತಿ ಮಾಡುತ್ತೇವೆ ಅಂತ ಹೇಳಿದ್ದರು. ಇದೆಲ್ಲ ಸಮಸ್ಯೆಗಳು ಹಾಗೆಯೇ ಉಳಿದಿವೆ. ಆದರೆ ತುಂಬಾ ಸ್ಪಷ್ಟವಾಗಿ ಈ ಗೌರವ ಶಿಕ್ಷಕರೇನು ಇಡೀ ರಾಜ್ಯದಲ್ಲಿ ಒಟ್ಟು ಇರೋದೇ 2100 ಮಾತ್ರ ; ಮೊದಲು 3850 ಇತ್ತು, ಈಗಾಗಲೇ ಮೂರು ಭಾರಿ ರಿಕ್ರೂಟ್‌ಮೆಂಟ್ ಆಗಿದೆ. ಆದರಲ್ಲಿ ಕೆಲವರನ್ನು ಭರ್ತಿಮಾಡಿಕೊಂಡಿದ್ದೀರಿ. ನಮ್ಮ ಒತ್ತಾಯ ಇಷ್ಟೇನೇ; ನೀವು ಹೇಗಿದ್ದರೂ ನಿವೃತ್ತ ಶಿಕ್ಷಕರನ್ನು ನೇಮಕ ಮಾಡ್ತೀವಿ ಅಂತ ಒಪ್ಪಿಕೊಂಡಿದ್ದಿರಿ. ಇಡೀ ರಾಜ್ಯದಲ್ಲಿ ಯುವಕರಿಗೆ ಮತ್ತು ಈಗಾಗಲೇ ಅಧ್ಯಾಪಕರಿರುವವರಿಗೆ ಅನ್ಯಾಯವಾಗುತ್ತದೆ ಎನ್ನುವ ಪ್ರತಿಭಟನೆಯಿಂದ ಆ ನಿವೃತ್ತ ಶಿಕ್ಷಕರನ್ನು ನೇಮಕ ಮಾಡುವುದಿಲ್ಲ ಎಂದು ಘೋಷಣೆ ಮಾಡಿದಿರಿ. ನಿಜಕ್ಕೂ ನಾನು ರಾಜ್ಯದ ಯುವಕರ ಪರವಾಗಿ, ಈ ರಾಜ್ಯದ ಶಿಕ್ಷಕರ ಪರವಾಗಿ ನಿಮ್ಮ ಆರ್ಡರನ್ನು ನಾನು ಸ್ವಾಗತಿಸುತ್ತೇನೆ. ಆದರೆ ನೀವು ಹಾಗೆ ಘೋಷಣೆ ಮಾಡಿದಾಗ ನಿಮ್ಮ ಯೋಜನೆ ಸ್ಪಷ್ಟವಾಗಿತ್ತು, ಅವರಿಗೆಲ್ಲಾ ತಿಂಗಳಿಗೆ 1500ರೂ. ಕೊಡಲು ನೀವು ತಯಾರಾಗಿದ್ದಿರಿ ಈಗ ತುರ್ತಾಗಿ ನೀವು ಮಾಡಬೇಕಾದ ಕೆಲಸ ಎಂದರೆ ಈ ನಿವೃತ್ತ ಶಿಕ್ಷಕರಿಗೆ ಏನು ಹಣ ಕೊಡಬೇಕೆಂದು ತೀರ್ಮಾನ ಮಾಡಿದ್ದಿರಲ್ಲಾ, ಅದರಂತೆ ತಕ್ಷಣ

ಇವರಿಗೆ 500 ರೂನಿಂದ 1500 ರೂ. ಕೊಡ್ತೀವಿ ಎಂದು ಘೋಷಣೆ ಮಾಡಿ. ಮೊದಲನೆಯದಾಗಿ ಕಂಟ್ರಾಕ್ಟ್ ಬೇಸಿಸ್ ಮೇಲೆ ತೆಗೊಂಡಿದ್ದೇವೆ; ಅವರಿಗೆ 1500 ರೂ. ಕೊಡುತ್ತೇವೆ ಎಂದು ತೀರ್ಮಾನ ಮಾಡಿದರೆ ಈ ಅರ್ಧ ಸಮಸ್ಯೆ ಪರಿಹಾರವಾಗುತ್ತದೆ. ಏತಕ್ಕೆಂದರೆ 2100 ಜನರಲ್ಲಿ ರೋಸ್ಟರ್ ಪ್ರಕಾರ ಅನೇಕರು ನೇಮಕವಾಗಿದ್ದಾರೆ. ವಯೋಮಿತಿ ಆಧಾರದ ಮೇಲೆ ಆಯ್ಕೆಯಾಗಿದ್ದಾರೆ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಕೂಡ ಇದರ ಬಗ್ಗೆ ಬಂದಿದೆ. ವೇಯ್ಟೇಜ್ 0.5 ಪರ್ಸೆಂಟ್‌ಕೊಡ್ತೀವಿ ಅಂತ ಹಿಂದೆ ಹೇಳಿದ್ದು ತೀರಾ ನಾಚಿಕೆಗೇಡು. ಇದರಿಂದ ಎಸ್‌ಎಸ್‌ಎಲ್‌ಸಿ ಮಾರ್ಕ್ಸ್‌ಗೆ ಎರಡೂವರೆ ಮಾರ್ಕ್ಸ್ ಮಾತ್ರ ಸೇರುತ್ತಿತ್ತು ಎಂಬುದನ್ನು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತರಬಯಸುತ್ತೇನೆ. ಆದರೆ ಈಗ ನೀವು 2 ಪರ್ಸೆಂಟ್ ಮಾಡಿದ್ದರಿಂದ 10 ಮಾರ್ಕ್ಸ್ ಆದರೂ ಎಸ್‌ಎಸ್‌ಎಲ್‌ಸಿ ಅಂಕಗಳಿಗೆ ಸೇರುತ್ತದೆ. 10 ಮಾರ್ಕ್ಸ್ ಸೇರಿದರೆ ಅವರಿಗೇನು ಲಾಭವಾಗುತ್ತದೆ? ಅವರಲ್ಲಿ ಅನೇಕರು ಖಾಯಂ ಅಧ್ಯಾಪಕರಾಗುತ್ತಾರೆಂದು ಹೆಣ್ಣುಕೊಟ್ಟಿದ್ದಾರೆ; ಮದುವೆಯಾಗಿದ್ದಾರೆ. ಅವರಿಗೆಲ್ಲಾ ಮಕ್ಕಳಾಗಿವೆ 500 ರೂ.ನಲ್ಲಿ ಅವರು ಜೀವನ ಮಾಡಬೇಕು. ಇದ್ಯಾವ ನೀತಿ ಸರ್ಕಾರದ್ದು ಎಂಬುದು ನನಗಂತೂ ಅರ್ಥವಾಗುವುದಿಲ್ಲ ಮತ್ತೆ ಕನ್‌ಫರ್ಮ ಆದಮೇಲೆ ಈ ಮೂರು ನೇಮಕಾತಿಗಳಲ್ಲಿ ಅವರಿಗೆ ಸಿಕ್ಕಿರುವುದು ಏನೂ ಇಲ್ಲ, ಹೆಚ್ಚಿನ ಅವಕಾಶವೇ ಸಿಕ್ಕಿಲ್ಲ. ಅದಕ್ಕೋಸ್ಕರ ಮುಂದೆ ನೇಮಕಾತಿ ಮಾಡುವ ಸಂದರ್ಭದಲ್ಲಿ ಈ ಎಲ್ಲಾ ನಿರ್ಬಂಧವನ್ನುತೆಗೆದು ಅವರನ್ನು ಖಾಯಂ ಮಾಡುತ್ತೇವೆ ಎಂದು ತೀರ್ಮಾನಿಸಿ ಇಲ್ಲಿ ಘೋಷಣೆ ಮಾಡಬೇಕಾಗುತ್ತದೆ. 2100 ಜನರಿಗೆ ಈಗಾಗಲೇ ಪ್ರಾಮಾಣಿಕವಾಗಿ ನೀವೆಷ್ಟು ಕೊಡ್ತೀರೋ ಕೊಡಿ; ಇಲ್ಲಿಯವರಗೆ 300 ರೂ.ನಲ್ಲಿ ಜೀವನ ಮಾಡ್ತಿದ್ದರು ಪಾಪ ಅವರು, ಇಡೀ ರಾಜ್ಯದಲ್ಲಿ ಅಧ್ಯಾಪಕರಿಲ್ಲ ಎಂಬ ಕೊರತೆಯನ್ನು ನೀಗಿಸಿರುವ ಅಧ್ಯಾಪಕರಗಳಿಗೆ ನಮ್ಮ ಗುರುಗಳು ಅಂತ ತಿಳಿದುಕೊಂಡು ನಾವು ನಮಸ್ಕಾರ ಮಾಡಬೇಕು. 300 ರೂ.ನಲ್ಲಿ ಜೀವನ ಮಾಡುವಂತಹ ಸ್ಥಿತಿ ಇವತ್ತಿದೆಯೇ? ದಯವಿಟ್ಟು ಯೋಚನೆ ಮಾಡಿ. ವಿದ್ಯುತ್‌ದರಏರಿಸುತ್ತಾರೆ, ಕೆಎಸ್‌ಆರ್‌ಟಿಸಿ ದರ ಏರಿಸುತ್ತಾರೆ, ಎಲ್ಲಾ ದರ ಏರಿಸುತ್ತಾರೆ. ಆದರೆ ಅಧ್ಯಾಪಕರಿಗೆ ಕೊಡಬೇಕಾದ ಸಂಬಳ ಮಾತ್ರ ಏರಿಸುವುದಿಲ್ಲ. ಅದಕ್ಕೋಸ್ಕರ ಈಗಾಗಲೇ ಏನು ತೀರ್ಮಾನ ತೆಗೆದುಕೊಂಡಿದ್ದೀರಿ, ಆ ಪ್ರಕಾರ ಇವರನ್ನು ಪರಿಗಣನೆ ಮಾಡಿ, ಇವತ್ತು ನೀವು ಘೋಷಣೆ ಮಾಡಬೇಕಾಗಿರುವುದು ಎರಡು ಅಂಶ. ಒಂದು ನಿವೃತ್ತ ಶಿಕ್ಷಕರಿಗೆ 1500 ರೂ. ಕೊಡುತ್ತೇವೆ ಎಂದು ಏನು ಹೇಳಿದ್ದಿರಿ ಅದನ್ನು ಇವರಿಗೆ ಕೊಡುವ ಬಗ್ಗೆ ಇವತ್ತು ದಯವಿಟ್ಟು ಘೋಷಣೆ ಮಾಡಿ. ಅವರೇನು ಅಮರಣಾಂತ ಉಪವಾಸ ಮಾಡಿ ಸಾಯುವುದಕ್ಕೆ ಹೋಗ್ತಿದ್ದಾರೆ, ಅದನ್ನು ತಪ್ಪಿಸಿ. ಎರಡನೆಯ ಅಂಶಏನೆಂದರೆ, ನೀವು ಮುಂದೆ ನೇಮಕಾತಿ ಮಾಡುವ ಸಂದರ್ಭದಲ್ಲಿ ಅವರನ್ನು ಖಾಯಂ ಮಾಡೇ ಮಾಡುತ್ತೇವೆ ಎಂದು ದಯವಿಟ್ಟು ಆಶ್ವಾಸನೆ ಕೊಟ್ಟರೆ ಅಷ್ಟೂ ಜನ ಶಿಕ್ಷಕರ ಆಶೀರ್ವಾದ ನಿಮಗೆ ಇರುತ್ತದೆ; ನಿಜಕ್ಕೂ ಆಗ ಈ ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರ ಕೂಡ ಅಭಿವೃದ್ಧಿಯಾಗುತ್ತದೆ. ಉಪವಾಸದಲ್ಲಿ ಶಿಕ್ಷಕ ಪಾಠಮಾಡಿದರೆ ಮಕ್ಕಳಿಗೆ ಇನ್ನೇನು ಅರ್ಥವಾಗಬಹುದು ಎಂಬುದನ್ನು ದಯವಿಟ್ಟು ಯೋಚನೆ ಮಾಡಿ. 300 ರೂ. 500 ರೂ.ನಲ್ಲಿ ತಿಂಗಳುಗಟ್ಟಲೆ ಈ ರಾಜ್ಯದಲ್ಲಿ ದೇಶದಲ್ಲಿ ಜೀವನ ಮಾಡಲು ಅವಕಾಶ ಇದೆ ಎಂದು ನೀವು ತೀರ್ಮಾನ ಮಾಡುವುದಾದರೆ ನನ್ನದೇನೂ ಆಭ್ಯಂತರವಿಲ್ಲ. ಅದಕ್ಕೋಸ್ಕರ ಈಗಾಗಲೇ ಅಮರಣಾಂತ ಉಪವಾಸ ಶಿವಮೊಗ್ಗ ಬಳ್ಳಾರಿ ಹೀಗೆ ಬೇರೆ ಬೇರೆ ಕಡೆಗಳಲ್ಲಿ ಮಾಡುತ್ತಿದ್ದಾರೆ. ಇಡೀ ರಾಜ್ಯದ ಎಲ್ಲಾ ಕಡೆ ಹರಡುತ್ತದೆ; ಅದಕ್ಕೋಸ್ಕರ ಒಂದು ರೀತಿ ನಾನು ಸರ್ಕಾರಕ್ಕೆ ಮನವಿ ಅಥವಾ

ಎಚ್ಚರಿಕೆ ಕೊಡುವುದು ಇಷ್ಟೇನೆ; ಈ ಶಾಪಕ್ಕೆ ನೀವು ಈಡಾಗಬೇಡಿ. 1500 ರೂ.ಕೊಡುತ್ತೇವೆಂದು ತಕ್ಷಣ ಘೋಷಣೆ ಮಾಡಿ ಮುಂದೆ ನೇಮಕಾತಿ ಮಾಡುವಾಗ ಎಲ್ಲಾ ನಿರ್ಬಂಧ ಮೀರಿ ಇವರನ್ನು ಖಾಯಂ ಮಾಡುತ್ತೇವೆ ಎಂದು ಆಶ್ವಾಸನೆ ಕೊಡಬೇಕೆಂದು ಎಲ್ಲಾ ಶಿಕ್ಷಕರ ಪರವಾಗಿ ತಮ್ಮಲ್ಲಿ ಮನವಿ ಮಾಡುತ್ತೇನೆ.

ಡಾ: ಡಿ.ಬಿ.ಗಂಗಪ್ಪ(ಹೊನ್ನಾಳಿ):- ಮಾನ್ಯ ಅಧ್ಯಕ್ಷರೇ, ಶಿವಮೊಗ್ಗದಲ್ಲಿ ಸುಮಾರು ಒಂದು ತಿಂಗಳಿನಿಂದಲೂ 217 ಜನ ಉಪಾಧ್ಯಾಯರುಗಳು ನಮ್ಮ ಡಿಡಿಪಿಐ ಆಫೀಸಿನ ಮುಂದುಗಡೆ ಅಮರಣಾಂತರ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಈಗ ಅಲ್ಲಿ ಸುಮಾರು ಜನರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಕೆಲವರ ಜೀವಕ್ಕೂ ಸಹಿತ ತೊಂದರೆಯಾಗುತ್ತಿದೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಸರ್ಕಾರದ ಆದೇಶದ ಪ್ರಕಾರ ರೋಸ್ಟರ್ ಸಿಸ್ಟಂನಲ್ಲಿ ಅಪಾಯಿಂಟ್‌ಮೆಂಟ್ ಮಾಡಿಕೊಂಡಿದ್ದಾರೆ. ಅವರಿಗೆ 300-500 ರೂಪಾಯಿಯನ್ನು ಕೊಡುತ್ತಿದ್ದಾರೆ. ಅದರಲ್ಲಿ ಅವರು ಜೀವನವನ್ನು ಸಾಗಿಸುವುದು ಬಹಳ ಕಷ್ಟವಾಗುತ್ತಿದೆ. ಈ 217 ಜನರನ್ನು ರೆಗ್ಯುಲರ್ ಅಪಾಯಿಂಟ್ ಮಾಡುವುದರಿಂದ ಏನೂ ತೊಂದರೆಯಾಗುತ್ತಿಲ್ಲ. ಅವರನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ತೆಗೆದುಕೊಂಡು 1,500 ರೂಪಾಯಿಯನ್ನು ಕೊಡಬೇಕೆಂದು ಮಾನ್ಯ ಈಶ್ವರಪ್ಪನವರು ಹೇಳಿದರು, ಆದರೆ 1,500 ರೂಪಾಯಿಯನ್ನು ಕೊಡುವುದಕ್ಕಿಂತ ಅವರನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಅಪಾಯಿಂಟ್‌ಮೆಂಟ್ ಮಾಡಿಕೊಂಡರೆ ಅದರಿಂದ ಸರ್ಕಾರಕ್ಕೇನೂ ತೊಂದರೆಯಾಗುವುದಿಲ್ಲ. ನಾವು ಸ್ಥಳೀಯ ಶಾಸಕರುಗಳು ಅಲ್ಲಿಗೆ ಭೇಟಿ ಕೊಟ್ಟಿದ್ದೆವು. ಈಗಾಗಲೇ ಆ ಉಪಾಧ್ಯಾಯರುಗಳು ನಮ್ಮನ್ನು ಘೇರಾವು ಮಾಡುವುದು, ಇನ್ನು ಬೇರೆ ರೀತಿಯಿಂದ ನಮಗೆ ಹೆರಾಸ್‌ಮೆಂಟ್ ಮಾಡುವುದರಿಂದ ನಮಗೆ ಓಡಾಡುವುದಕ್ಕೂ ಬಹಳ ಕಷ್ಟವಾಗುತ್ತದೆ. ಅಕಸ್ಮಾತಾಗಿ ಏನಾದರೂ ಒಂದು ಜೀವಕ್ಕೆ ತೊಂದರೆ ಆದರೆ ಶಾಸಕರೂ ಸಹ ಬಹಳ ಕಷ್ಟ ಪಡಬೇಕಾಗುತ್ತದೆ. ಈಗಾಗಲೇ ನಮ್ಮ ಮಿತ್ರರಾದಂತಹ ಉಳಿದ ಶಾಸಕರುಗಳು ಹೇಳಿದಹಾಗೆ ಅವರನ್ನು ಕಂಟ್ರಾಕ್ಟ್ ಬೇಸಿಸ್ ಮೇಲೆ ಅಪಾಯಿಂಟ್‌ಮೆಂಟ್ ಮಾಡಿಕೊಂಡು ಈ ತೊಂದರೆಯನ್ನು ನಿವಾರಿಸಬೇಕೆಂದು ನಾನು ತಮ್ಮ ಮುಖಾಂತರ ಸಂಬಂಧಪಟ್ಟಂತಹ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

(ಶ್ರೀ ಅಂಜನಾಮೂರ್ತಿ (ಉಪಾಧ್ಯಕ್ಷರು) ಪೀಠವನ್ನಂಲಕರಿಸಿದರು)

ಶ್ರೀಮತಿ. ನಾಗಮ್ಮ ಸಿ.ಕೇಶವಮೂರ್ತಿ(ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೇ, ಈ ಗೌರವ ಶಿಕ್ಷಕರ ಸಮಸ್ಯೆ ಕೆಲವಾರು ಜಿಲ್ಲೆಗಳಲ್ಲಿರುವುದನ್ನು ನಾವು ನೋಡುತ್ತಿದ್ದೇವೆ. ಮತ್ತು ಕೆಲವಾರು ಜಿಲ್ಲೆಗಳಲ್ಲಿ ಉಪವಾಸ ಸತ್ಯಾಗ್ರಹವನ್ನು ಸಹ ಪ್ರಾರಂಭ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಮೊದಲನೆಯದಾಗಿ ನಮ್ಮ ಸದಸ್ಯರಿಗೆ ಗೊತ್ತಿದೆಯೋ ಇಲ್ಲವೋ, ಆದರೆ ನಾನು ಒಂದನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಕೆಲವಾರು ಜಿಲ್ಲೆಗಳಲ್ಲಿ ಅವರು ರೋಸ್ಟರ್ ಪದ್ಧತಿಯನ್ನು ಫಾಲೋ ಮಾಡಿದ್ದಾರೆ. ಇನ್ನು ಕೆಲವಾರು ಜಿಲ್ಲೆಗಳಲ್ಲಿ ರೋಸ್ಟರ್ ಪದ್ಧತಿಯನ್ನು ಫಾಲೋ ಮಾಡಿಲ್ಲ; ಅದಲ್ಲದೆ ಟ್ರೈನಿಂಗ್ ಆಗದೆ ಇರತಕ್ಕಂಥವರನ್ನೂ ಸಹ ಇದರಲ್ಲಿ ಟೀಚರ್ ಆಗಿ ನಮ್ಮ ಜಿಲ್ಲಾ ಪರಿಷತ್ತಿನವರು ಅಪಾಯಿಂಟ್‌ಮೆಂಟ್ ಮಾಡಿಕೊಂಡು ಬಿಟ್ಟಿದ್ದಾರೆ. ಮತ್ತು ಕೆಲವು ಜಿಲ್ಲೆಗಳಲ್ಲಿ ಜಿಲ್ಲಾ ಪರಿಷತ್ತು ಅಲ್ಲ, ಮಂಡಲ್‌ನವರೂ ಸಹ ತಮಗೆ ಇಷ್ಟ ಬಂದವರನ್ನು ನೇಮಕಮಾಡಿಕೊಂಡು ಇವತ್ತು ಅವರು ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ

ಡಿಸ್‌ಪ್ಯಾರಿಟೀಸ್ ಬಹಳ ಇರುವುದರಿಂದ ಈ ಗೌರವ ಶಿಕ್ಷಕರಿಗೆ ನಾವು ಸಹಾಯ ಮಾಡಬೇಕೆನ್ನುವ ದೃಷ್ಟಿಯಿಂದ ಹಾಗೂ ಹೈಕೋರ್ಟಿನಿಂದ ಒಂದು ಆದೇಶ ಬಂದಿದ್ದರಿಂದ ಇವರಿಗೆ ನಾವು ಅವರ ಸರ್ವೀಸ್ ಅನ್ನು ಪ್ರತಿವರ್ಷಕ್ಕೆ 0.50 ವೈಟೇಜ್ ಕೊಡಬೇಕೆಂದು ತೀರ್ಮಾನ ಮಾಡಿದ್ದೆವು. ಅದಾದ ಮೇಲೆ ಅವರಿಗೆ ವಯಸ್ಸಿನಲ್ಲಿ ರಿಯಾಯತಿ ಮಾಡಬೇಕೆಂದು ತೀರ್ಮಾನವಾಯಿತು. ಈ ಕ್ರಮದಿಂದ ಸುಮಾರು 1000-1100 ಜನಕ್ಕೆ ಇವತ್ತು ಕೆಲಸ ಸಿಕ್ಕಿದೆ. ತಾವೇ ಹೇಳುವ ಹಾಗೆ ಈಗ ಉಳಿದಿರತಕ್ಕಂಥವರು ಕೇವಲ ಎರಡು ಸಾವಿರ ಜನ. ಈಗ ಒಂದು ಪ್ರಶ್ನೆಯನ್ನು ಮಾನ್ಯ ಕರಿಯಣ್ಣನವರು ಎತ್ತಿದರು; ಆದೇನೆಂದರೆ ನಿವೃತ್ತ ಅಧ್ಯಾಪಕರನ್ನು ತಾವು ಕಂಟ್ರಾಕ್ಟ್ ಬೇಸಿಸ್ ಮೇಲೆ ಏನು ನೇಮಕ ಮಾಡಿದ್ದೀರಿ ಆದೇ ರೀತಿಯಲ್ಲಿ ಇವರನ್ನೂ ಸಹ ತೆಗೆದುಕೊಂಡು ಮುಂದುವರೆಸಬಹುದು ಎಂದು. ಈಗ ನಿವೃತ್ತಿ ಶಿಕ್ಷಕರನ್ನು ತೆಗೆದುಕೊಳ್ಳಬೇಕೆಂದು ಇದ್ದ ಒಂದು ನಿರ್ಣಯವನ್ನು ನಾವು ವಾಪಸ್ಸು ತೆಗೆದುಕೊಂಡಿದ್ದೇವೆ. ನಿವೃತ್ತಿ ಶಿಕ್ಷರವನ್ನು ತೆಗೆದುಕೊಂಡರೆ ನಮಗೆ ಲೀಗಲ್ ಇಂಪ್ಲಿಕೇಷನ್ಸ್ ಇರುವುದಿಲ್ಲ. ಇವರನ್ನು ನಾವು ತೆಗೆದುಕೊಂಡರೆ ಲೀಗಲ್ ಇಂಪ್ಲಿಕೇಷನ್ಸ್ ಬರುತ್ತದೆ. ಈಗ ಪಾರ್ಟ್‌ಟೈಮ್ ಟೀಚರ್ಸ್ ಎಂದು ನಾವು ತೆಗೆದುಕೊಂಡಿರುವವರು ಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಈ ಒಂದು ಲೀಗಲ್ ಇಂಪ್ಲಿಕೇಷನ್ಸ್ ಸಹ ಇದರಲ್ಲಿ ಇರುತ್ತದೆ. ಈಗ ಈ ಎಲ್ಲಾ ಶಿಕ್ಷಕರು 4-5 ವರ್ಷಗಳಿಂದ ಕೆಲಸಮಾಡುತ್ತಿದ್ದಾರೆ. ಇವರಿಗೆ ಮುಂದಿನ ರಿಕ್ರೂಟ್‌ಮೆಂಟ್ ಮಾಡುವಾಗ ಅದರಲ್ಲಿ ಅವರಿಗೆ ಹೆಚ್ಚು ವೆಟೇಜ್ ಕೊಟ್ಟರೆ, ಅವರಿಗೆ ಎಲ್ಲರಿಗೂ ಸಹ ಕೆಲಸ ಸಿಗಬಹುದು ಎನ್ನುವಂತಹ ದೃಷ್ಟಿಯಿಂದ ಈಗ ಇದ್ದಂತಹ 0.5 ಅನ್ನುವರಡರಷ್ಟಲ್ಲ; ನಾಲ್ಕರಷ್ಟು ನಾವು ಜಾಸ್ತಿ ಮಾಡುತ್ತಿದ್ದೇವೆ. ಅಂದರೆ Two marks for every year ಈ ರೀತಿ ಪರ್ಸೆಂಟೇಜನ್ನು ನಾವು ಜಾಸ್ತಿ ಮಾಡುವುದರಿಂದ ಮುಂದಿನ ರಿಕ್ರೂಟ್‌ಮೆಂಟ್‌ನಲ್ಲಿ ಇವರೆಲ್ಲರನ್ನು ಸಹ ನಾವು ಅಬ್ಸಾರ್ಬ್ ಮಾಡಲಿಕ್ಕೆ ಸಾಧ್ಯತೆ ಇದೆ ಅಂತ ನಾನು ಭಾವಿಸಿದ್ದೇನೆ. ಆದರೆ ನಾವೇನು ರಿಕ್ರೂಟ್‌ಮೆಂಟ್ ಮಾಡಬೇಕಾಗಿದ್ದರೂ ಸಹ ಈಗ ಇರತಕ್ಕಂಥ ಕಾನೂನಿನ ಪ್ರಕಾರ ರೊಸ್ಟರ್ ಪದ್ಧತಿಯ ಪ್ರಕಾರ ಮತ್ತು ಈಗ ಇರತಕ್ಕಂಥ ಆಕ್ಟ್‌ನ ಪ್ರಕಾರ ನಾವು ಅವರೆಲ್ಲರನ್ನು ಸಹ ಅಬ್ಸಾರ್ಬ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಆದಕ್ಕಾಗಿ ಈ ನಿರ್ಣಯವನ್ನು ಮುಂದೆ 0.5 ಎಂದು ಇರುವುದನ್ನು 2 ಅಂತ ಮಾಡಲಿಕ್ಕೆ ಒಂದು ನಿರ್ಧಾರವನ್ನು ಕೈಗೊಳ್ಳುವ ಸ್ಥಿತಿಯಲ್ಲಿದ್ದೇವೆ.

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೇ, ನಾವು ಹೊಸದಾಗಿ ತೆಗೆದುಕೊಳ್ಳಿ ಎಂದು ಹೇಳುತ್ತಿಲ್ಲ. ಹೊಸದಾಗಿ ತೆಗೆದುಕೊಂಡರೆ ಅವರು ಹೇಳಿದಹಾಗೆ ಲೀಗಲ್ ಇಂಪ್ಲಿಕೇಷನ್ಸ್ ಬರುತ್ತದೆ ಮತ್ತೆ ಅವರು ನಮಗೆ ಖಾಯಂ ಮಾಡಬೇಕು ಎಂದು ಹೇಳುತ್ತಾರೆ. ಈಗಾಗಲೇ ಇವರನ್ನು ತೆಗೆದುಕೊಂಡು ಐದು ವರ್ಷ ಆಗಿ ಹೋಗಿದೆ. ಐದು ವರ್ಷಗಳ ಕಾಲ ಅವರು ಸರ್ವೀಸ್ ಮಾಡಿದ್ದಾರೆ. ಹೈಕೋರ್ಟ್ ಅವರನ್ನು ಕೆಲಸದಿಂದ ತೆಗೆಯಬಾರದು ಎಂದು ಆರ್ಡರ್ ಮಾಡಿದೆ. ಅವರನ್ನು ತೆಗೆಯುವುದಕ್ಕೆ ನಿಮಗೆ ಅಧಿಕಾರ ಈಗ ಇಲ್ಲ; ಆದ್ದರಿಂದ ಈಗ ಏನಾಗಿದೆ ಎಂದರೆ ಅವರಿಗೆ ಟಿಸಿಹೆಚ್ ಪಾಸ್ ಮಾಡಿದ್ದರೆ ರೋಸ್ಟರ್ ಸಿಸ್ಟಂನಲ್ಲಿ ಅವರು ಇದ್ದರೆ ಅವರನ್ನು ಖಾಯಂ ಮಾಡಿ. ಒಂದೇ ಸಾರಿ ಏಕಕಂತಿನಲ್ಲಿ ಖಾಯಂ ಮಾಡಿ. ಮತ್ತು ಒಂದು ಪಕ್ಷ ಈಗ ಆಗುವುದಿಲ್ಲ, ರೋಸ್ಟರ್ ಪ್ರಕಾರ 2 ಪಾಯಿಂಟ್ಸ್ ಕೊಟ್ಟು ಪ್ರತಿ ವರ್ಷ ಮಾಡುತ್ತೇವೆ ಎನ್ನುವುದಾದರೆ ಅದೇ ರೀತಿ ಮಾಡಿ. ಬೇಡ ಎಂದು ಹೇಳುವುದಿಲ್ಲ. ಆದರೆ ಸಂಬಳ

300 ರೂಪಾಯಿ ಇರುವುದನ್ನು ಕಂಟ್ರಾಕ್ಟ್ ಬೇಸಿಸ್‌ನಲ್ಲಿ ಇವರಿಗೆ ಮಾತ್ರ ಹೊಸದಾಗಿ ಅಪಾಯಿಂಟ್ ಆದವರ ಬಗ್ಗೆ ನಾವು ಹೇಳುತ್ತಿರುವುದಲ್ಲ. ಐದು ವರ್ಷ ಸರ್ವೀಸ್ ಯಾರು ಮಾಡಿದ್ದಾರೋ ಅವರಿಗೆ ಕಂಟ್ರಾಕ್ಟ್ ಬೇಸಿಸ್ ಸ್ಕಾಲರಿ ಕೊಡಿ. ಏನೆಂದರೆ ಸಂಬಳಕ್ಕಿಂತ ಹತ್ತು ರೂಪಾಯಿ ಕಡಿಮೆ ಕೊಟ್ಟು ಒಂದು ಸಾರಿ ಕಂಟ್ರಾಕ್ಟ್ ಬೇಸಿಸ್‌ನಲ್ಲಿ ಅಪಾಯಿಂಟ್ ಮಾಡಿಕೊಂಡಿದ್ದರಲ್ಲಾ, ಆ ಸ್ಕಾಲರಿಯನ್ನು ಅವರಿಗೆ ನೀವು ಕೊಟ್ಟುಬಿಟ್ಟರೆ ಇನ್ನು ಐದು ವರ್ಷದೊಳಗಡೆ ರೋಸ್ಟರ್ ಸಿಸ್ಟಂನಲ್ಲಿ ಅವರೆಲ್ಲರನ್ನೂ ಅಪಾಯಿಂಟ್ ಮಾಡಿಕೊಳ್ಳಬಹುದು ಕಡೆಯ ಪಕ್ಷ ಸಂಬಳವನ್ನಾದರೂ ಕಂಟ್ರಾಕ್ಟ್ ಬೇಸಿಸ್‌ಗೆ ಏರಿಸಿ. ನಾವು ಹೊಸದಾಗಿ ತೆಗೆದುಕೊಳ್ಳುವುದಕ್ಕೆ ಕೇಳುತ್ತಿಲ್ಲ. ಈಗ ತೆಗೆದುಕೊಂಡಿರುವವರಿಗೆ ಮಾಡಬೇಕು ಎಂದು ಹೇಳಿ ತಮ್ಮ ಗಮನವನ್ನು ಸೆಳೆಯುತ್ತೇನೆ. ತಾವೇ ಹೇಳಿ, ಮೂರು ನೂರು ರೂಪಾಯಿಯಿಂದ ಐದು ನೂರು ರೂಪಾಯಿಗಳಲ್ಲಿ ಯಾರಾದರೂ ಒಂದು ಹಳ್ಳಿಯೊಳಗೆ ಉಪಾಧ್ಯಾಯರ ಹುದ್ದೆಯನ್ನು ಮಾಡಿ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ತಾವೇ ಹೇಳಿ. ನಾವೇನೂ ಹೊಸದಾಗಿ ತೆಗೆದುಕೊಳ್ಳಿ ಎಂದುಹೇಳುತ್ತಿಲ್ಲ. ತೆಗೆದುಕೊಂಡಿರುವವರ ಬಗ್ಗೆ ತಮಗೆ ಕೋರ್ಟು ಆದೇಶ ಇದೆ; ಅವರನ್ನು ತೆಗೆಯುವುದಕ್ಕಾಗುವುದಿಲ್ಲ ಎಂದು ಹೇಳಿ ಅವರನ್ನು ಸಾಯಿಸುವುದಕ್ಕೆ ಬರುವುದಿಲ್ಲ. ಆದ್ದರಿಂದ ದಯಮಾಡಿ ಅವರಿಗೆ ಕಂಟ್ರಾಕ್ಟ್ ಬೇಸಿಸ್ ಸ್ಕಾಲರಿ ಕೊಡಿ. ನಿಮ್ಮ ನಿಯಮದ ಪ್ರಕಾರವೇ ಅವರನ್ನು ರೆಗ್ಯುಲರೈಸ್ ಮಾಡಿಕೊಳ್ಳುತ್ತಾ ಹೋಗಿ ಎಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಆರ್.ಎನ್.ನಾಯಕ್:- ಇವತ್ತು ಭಟ್ಕಳದಲ್ಲಿ ಜನ ಸಾಯುತ್ತಿದ್ದಾರೆ.

ಶ್ರೀ ಕೆ.ಎಸ್ ಈಶ್ವರಪ್ಪ:- ತಾವೇ ಉತ್ತರ ಹೊಟ್ಟಿದ್ದೀರಿ, ಕೆಲವು ಕಡೆ ರೋಸ್ಟರ್‌ನ್ನು ಫಾಲೊ ಮಾಡಿದ್ದಾರೆ ಎಂದು.

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ:- ಕೆಲವು ಕಡೆ ಮಾಡಿಲ್ಲ.

ಶ್ರೀ ಕೆ.ಎಸ್ ಈಶ್ವರಪ್ಪ:- ಮಾಡಿರುವ ಕಡೆಯಲ್ಲಾದರೂ ಕನ್‌ಪರ್ಮ್ ಮಾಡಿ. ಮಾಡಿಲ್ಲ ಎಂದು ಹೇಳಿ ಮಾಡಿದವರಿಗೂ ತೊಂದರೆ ಕೊಡುವುದು ಸರಿಯೇ? ಈಗ ಅನ್ಯಾಯ ಮಾಡಿದ್ದಾರೆ ಎಂದು ನ್ಯಾಯವಾಗಿರುವವರಿಗೂ ತೊಂದರೆ ಕೊಟ್ಟರೆ ಇದು ಯಾವ ನ್ಯಾಯ? ಅದಕ್ಕೋಸ್ಕರ ಇಲ್ಲಿ ಸ್ಪಷ್ಟ ಮಾಡಬೇಕಾಗುತ್ತದೆ. ಏಕೆಂದರೆ ತಿಂಗಳುಗಟ್ಟಲೆಯಿಂದ ಅವರು ಅಮರಣಾಂತರ ಉಪವಾಸ ಕುಳಿತಿದ್ದಾರೆ. ನಾವು ಇಲ್ಲಿಂದ ಮತ್ತೆ ಹೋಗುತ್ತಿದ್ದ ಹಾಗೆ, ಅವರಿಗೆ ಉತ್ತರ ಕೊಡುವ ಸ್ಥಿತಿಯಲ್ಲಿ ನಾವು ಇರುವುದಿಲ್ಲ. ಆದ್ದರಿಂದ ನಾನು ಹೇಳುತ್ತಿರುವುದು ನಿಮಗೆ ಕಾನೂನು ಪ್ರಕಾರವಾಗಿ ಏನೇನು ಮಾಡುವುದಕ್ಕಾಗುತ್ತದೆ ಅದನ್ನು ಇವರಿಗೆ ಮಾಡಿಬಿಡಿ. ಯಾರದು ರೋಸ್ಟರ್ ಪ್ರಕಾರ ನೇಮಕವಾಗಿದೆಯೋ ಅದನ್ನು ಮುಗಿಸಿ. ಶಿವಮೊಗ್ಗ ಜಿಲ್ಲೆಯಲ್ಲಿ ಆ ಸಮಸ್ಯೆ ಇಲ್ಲ. 217 ಜನಕ್ಕೂ ಕೂಡ ರೋಸ್ಟರ್ ಪ್ರಕಾರವೇ ತೆಗೆದುಕೊಂಡಿದ್ದಾರೆ ಎಂಬುದು ನಿಮಗೆ ಗೊತ್ತಿದೆ. ಅಕಸ್ಮಾತ್ ತೆಗೆದುಕೊಂಡಿಲ್ಲ ಎಂದರೆ ಅದರ ಬಗ್ಗೆ ವೆರಿಫೈ ಮಾಡಿಸಿ. ರೋಸ್ಟರ್ ಪ್ರಕಾರ ಯಾವುದ್ಯಾವುದು ಆಗಿದೆ, ಅಂತಹ ಎಲಿಜಿಬಿಲಿಟಿ ಇರುವವರಿಗೆ ದಯವಿಟ್ಟು ಕನ್‌ಫರ್ಮ್ ಮಾಡಿಬಿಡಿ. ಇಲ್ಲದಿದ್ದರೆ ತೊಂದರೆಯಾಗುತ್ತದೆ. ಎರಡನೆಯದು ತಾವು ಹೇಳುತ್ತೀರಿ, ನಿವೃತ್ತ ಶಿಕ್ಷಕರನ್ನು ತೆಗೆದುಕೊಂಡರೆ ಲೀಗಲ್ ಇಂಪ್ಲಿಕೇಷನ್ಸ್ ಇರುವುದಿಲ್ಲ ಎಂದು. ಅಂದರೆ ಇರುವುದು, ಇರುವುದಿಲ್ಲ ಎನ್ನುವ ಪ್ರಶ್ನೆ

ಅಲ್ಲ. ಇವರನ್ನು ಖಾಯಂ ಮಾಡುವುದಕ್ಕೆ ಏನು ಮಾಡಬೇಕು ಎನ್ನುವುದು ಪ್ರಶ್ನೆ. ಸರ್ವೀಸ್ ಮಾಡಿಕೊಂಡು ಬಂದಿದ್ದಾರೆ. ಸರ್ವೀಸ್ ಮಾಡಿಕೊಂಡಿರುವವರಿಗೆ ಅನುಕೂಲವಾಗುವ ದೃಷ್ಟಿಯಲ್ಲಿ ನೀವು ಕಾನೂನನ್ನು ಹುಡುಕಿಕೊಂಡು ಹೋಗಬೇಕೇ ವಿನಹ ಲೀಗಲ್ ಇಂಪ್ಲಿಕೇಷನ್ಸ್ ಬರುತ್ತದೆ. ಅದಕ್ಕೋಸ್ಕರ ಇವರನ್ನು ಕೈ ಬಿಡುತ್ತೇವೆ ಎನ್ನುವ ತರಹದಲ್ಲಿ ಯೋಚನೆ ಮಾಡುವ ಸರ್ಕಾರದ ಧಾಟಿಯೇ ತಪ್ಪು ಎಂದು ನನಗನಿಸುತ್ತದೆ. ಅದಕ್ಕೋಸ್ಕರ ನಾನು ಹೇಳುತ್ತಿರುವುದು ಲೀಗಲ್ ಇಂಪ್ಲಿಕೇಷನ್ಸ್‌ಗಳಿಂದ ಅನುಕೂಲ ಮಾಡಿಕೊಡುವ ದೃಷ್ಟಿಯಲ್ಲಿ ಯೋಚನೆಯನ್ನು ಮಾಡಬೇಕು. ಇದು ಎರಡನೆಯದು. ಮೂರನೆಯದು ಮುಂದೆ ಎಲ್ಲಾ ರೆಕ್ರೂಟ್‌ಮೆಂಟ್‌ನಲ್ಲೂ ಎರಡು ಪರ್‌ಸೆಂಟ್ ಜಾಸ್ತಿ ಮಾಡುತ್ತೇವೆ, ಎಲ್ಲರನ್ನೂ ಅಬ್‌ಸಾರ್ಬ್ ಮಾಡಿಕೊಳ್ಳುವಂಥ ಅವಕಾಶಗಳು ಇದೆ ಎಂದು ಹೇಳುತ್ತಿದ್ದೀರಿ, ಅವಕಾಶ ಇದೆ ಎಂದು ಗೊತ್ತಿದ್ದರೆ ಏತಕ್ಕೆ ಈಗಲೇ ಮಾಡಿಕೊಳ್ಳಬಾರದು? ಮಾನವೀಯತೆ ಪ್ರಶ್ನೆ ಇಲ್ಲಿದೆ. ಅವರಿಗೆ 500 ರೂಪಾಯಿ ಸಂಬಳವನ್ನು ಕೊಡುತ್ತಿದ್ದೇವೆ, ಐದು ವರ್ಷದಿಂದ ಸರ್ವೀಸ್ ಮಾಡುತ್ತಿದ್ದಾರೆ, ಇದು ಯಾವ ನ್ಯಾಯ? ಅದಕ್ಕೋಸ್ಕರ ಈ ಮೂರು ಅಂಶಗಳನ್ನು ಗಮನಿಸಬೇಕು. ತಾವು ಮೊದಲನೆಯದಾಗಿ ಕಂಟ್ರಾಕ್ಟ್ ಬೇಸಿಸ್ ಮೇಲೆ ಕೊಡುತ್ತಿರುವ ಹಣವನ್ನು ಅವರಿಗೆ ಇವತ್ತಿನಿಂದಲೇ ಕೊಡುವಂಥ ಪ್ರಯತ್ನವನ್ನು ಮಾಡಬೇಕು. ಎರಡನೆಯದಾಗಿ ಇದರಲ್ಲಿ ನಾವು ನಿಮ್ಮನ್ನು ದಾರಿ ತಪ್ಪಿಸುವುದಕ್ಕೆ ಹೇಳುತ್ತಿಲ್ಲ. ಈ ರೋಸ್ಟರ್ ಪದ್ಧತಿಯಲ್ಲಿ ಯಾರ್ಯಾರು ನೇಮಕಾತಿ ಆಗಿದ್ದಾರೆ ಅವರಿಗೆ ತಕ್ಷಣ ಖಾಯಂ ಮಾಡುವಂಥ ಆದೇಶವನ್ನು ಮಾಡಬೇಕು. ಮೂರನೆಯದಾಗಿ ಲೀಗಲ್ ಇಂಪ್ಲಿಕೇಷನ್ಸ್ ಎಂದು ಹೇಳಿ ಇವರಿಗೆ ಅನಾನುಕೂಲ ಮಾಡದೇ ತಾವು ಯಾವ ರೀತಿ ಇವರಿಗೆ ಅನುಕೂಲ ಮಾಡಿಕೊಡುತ್ತೀರಿ ಎನ್ನುವುದನ್ನು ನಮಗೆ ತಿಳಿಸಬೇಕು. ಈ ಎಲ್ಲಾ ವಿಚಾರಗಳನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ:- ಈಗ ಮಾನ್ಯ ಸದಸ್ಯರು ಏನು ಕೆಲವು ವಿಷಯಗಳನ್ನು ಎತ್ತಿದ್ದಾರೆ, ಈಗ ಇದು ಕೇವಲ ಒಂದು ಜಿಲ್ಲೆಯ ಪ್ರಶ್ನೆಯಲ್ಲ. ಇದು ಇಡೀ ರಾಜ್ಯದ ಪ್ರಶ್ನೆ. ರಾಜ್ಯದ ಕೆಲವಾರು ಜಿಲ್ಲೆಗಳಲ್ಲಿ ಈ ರೆಕ್ರೂಟ್‌ಮೆಂಟ್ ಆಗಿದೆ ಎಂದು ನಾನು ಹೇಳಿದ್ದೇನೆ. ಇವರನ್ನು ರೆಕ್ರೂಟ್‌ಮೆಂಟ್ ಮಾಡಿರತಕ್ಕಂಥವರು ಜಿಲ್ಲಾ ಪರಿಷತ್‌ನವರು. ಇನ್ನು ಕೆಲವಾರು ಕಡೆ ಮಂಡಲ್‌ದವರೂ ಸಹ ರಿಕ್ರೂಟ್‌ಮೆಂಟ್ ಮಾಡಿದ್ದಾರೆ. ಅದು ಕೆಲವಾರು ಕಡೆ ನಿಯಮಬದ್ಧವಾಗಿ ರೆಕ್ರೂಟ್‌ಮೆಂಟ್ ಆಗಿದೆ. ಆದರೆ ಕೆಲವಾರು ಕಡೆ ನಿಯಮಬದ್ಧವಾಗಿ ರೆಕ್ರೂಟ್‌ಮೆಂಟ್ ಆಗಿಲ್ಲ. ಮೊದಲನೆಯದಾಗಿ ನಾನಂತೂ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಮಾನ್ಯ ಸದಸ್ಯರು ಏನು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ, ಅದಕ್ಕಿಂತಲೂ ಹೆಚ್ಚಿನ ಕಳಕಳಿ ನಮಗೂ ಇದೆ ಹಾಗೂ ನಮ್ಮ ಸರ್ಕಾರಕ್ಕೂ ಇದೆ. ಇವರನ್ನು ಎಂದೂ ನಾವು ಕೈಬಿಡುವುದಕ್ಕೆ ಸಾಧ್ಯವೂ ಇಲ್ಲ. ಕೈಬಿಡುವುದೂ ಇಲ್ಲ. ಆದರೆ ಟೈಮಿನ ಪ್ರಶ್ನೆ ಇದೆ. ಈಗಿರುವ ನಿಯಮಗಳ ಪ್ರಕಾರ ಎಲ್ಲರನ್ನೂ ನಾವು ಎನ್‌ಮಾಸ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ನೆಕ್ಸ್ಟ್ ರಿಕ್ರೂಟ್‌ಮೆಂಟಿನಲ್ಲಿ ಅವರಿಗೆ ನಾವು ಎರಡು ಪರ್ಸೆಂಟ್ ವೈಟೇಜ್ ಕೊಡುವುದರಿಂದ ಅವರಿಗೆ ಖಂಡಿತ ಕೆಲಸ ಸಿಗಲಿಕ್ಕೆ ಸಾಧ್ಯತೆ ಇದೆ. ಮತ್ತೊಂದು ಪ್ರಶ್ನೆಯನ್ನು ಮಾನ್ಯ ಕರಿಯಣ್ಣನವರು ಎತ್ತಿದ್ದಾರೆ. ಏನೆಂದರೆ, ಅವರಿಗೆ ಕೊಡತಕ್ಕ ಸಂಬಳವನ್ನಾದರೂ ಜಾಸ್ತಿ ಮಾಡಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಅವರು ಹೇಳಿದ್ದಾರೆ. ಅವರನ್ನು ನೇಮಕ ಮಾಡಿ ಸಂಬಳವನ್ನು ನಿಗದಿ ಮಾಡಿದವರೂ ಸಹ ಜಿಲ್ಲಾ ಪರಿಷತ್ತಿನವರು ಈಗ ಅವರಿಗೆ ಸಂಬಳ

ಕೊಡುತ್ತಿರುವವರು ಅವರೇ. ನಾವು ಸರ್ಕಾರದಿಂದ ಯಾವುದೇ ಹಣವನ್ನು ಬಿಡುಗಡೆ ಮಾಡುತ್ತಾ ಇಲ್ಲ. ಅವರನ್ನು ನಾವು ಅಬ್‌ಸಾರ್ಬ್ ಮಾಡಿಕೊಂಡ ಮೇಲೆ ಅವರು ನಮ್ಮ ಸರ್ಕಾರದ ಒಂದು ಸರ್ವೀಸ್‌ಗೆ ಬರುತ್ತಾರೆ. ಆ ಪ್ರಕಾರ ಅವರಿಗೆ ಸಂಬಳ ಬರುತ್ತದೆ. ಆದರೂ ತಾವು ಏನು ಭಾವನೆಯನ್ನು ವ್ಯಕ್ತ ಮಾಡಿದ್ದೀರಿ ಅದರ ಬಗ್ಗೆ ಹೇಳ ಬೇಕಾದರೆ. ಅವರಿಗೆ ಕೊಡುತ್ತಿರುವ ಸಂಬಳದಲ್ಲಿ ವೇರಿಯೇಷನ್ ಇದೆ. ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿಯಲ್ಲಿ ಸಂಬಳ ಕೊಡುತ್ತಿದ್ದಾರೆ. ಒಂದು ಜಿಲ್ಲೆಯಲ್ಲಿ 250 ರೂಪಾಯಿ ಕೊಡುತ್ತಿದ್ದರೆ ಮತ್ತೊಂದು ಜಿಲ್ಲೆಯಲ್ಲಿ 600 ರೂಪಾಯಿ ಕೊಡುತ್ತಿದ್ದಾರೆ; ಮತ್ತೊಂದು ಜಿಲ್ಲೆಯಲ್ಲಿ 300 ರೂಪಾಯಿ ಕೊಡುತ್ತಿದ್ದಾರೆ. ಹೀಗೆ ಒಂದೊಂದು ಕಡೆ ಒಂದೊಂದು ರೀತಿ ಇರುವುದರಿಂದ ಇವೆಲ್ಲವನ್ನೂ ಪರಿಗಣಿಸಿ ಅವರಿಗೆ ಸ್ವಲ್ಪಜಾಸ್ತಿ ಕೊಡಲಿಕ್ಕೆ ಏನಾದರೂ ವ್ಯವಸ್ಥೆ ಮಾಡುವ ಬಗ್ಗೆ ನಾನು ಖಂಡಿತ ಪರಿಗಣಿಸುತ್ತೇನೆ ಎಂದು ಹೇಳುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ:- ಕೊನೆಯ ಪಕ್ಷ ನೀವು ತೀವ್ರವಾಗಿ ಸರ್ಕಾರ ಗಮನಿಸುತ್ತಿದೆ; ನೀವು ಉಪವಾಸವನ್ನು ನಿಲ್ಲಿಸಿ ಎಂದು ಕೇಳುವುದಾದರೂ ಬೇಡವೇ?

ಶ್ರೀ ಕೆ.ಎಸ್.ಈಶ್ವರಪ್ಪ:- ಎಷ್ಟು ಎಂದು ಹೇಳಿಲ್ಲ. ಗಮನಿಸುತ್ತೇವೆ ಎಂದು ಹೇಳಿದಿರಿ. ಅವರು ಉಪವಾಸ ಕುಳಿತಿದ್ದಾರೆ ಅವರನ್ನು ಎಬ್ಬಿಸಬೇಕು. ನಾವು ಈಗ ಊರಿಗೆ ಹೋಗುತ್ತಿದ್ದೇವೆ. ಎಷ್ಟು ಎಂದು ಹೇಳಿದರೆ ನಿಮಗೆ ಸರ್ಕಾರ ಈ ರೀತಿ ಪ್ರಾಮಿಸ್ ಮಾಡಿದೆ, ನಿಮಗೆ ಇಷ್ಟು ದುಡ್ಡು ಕೊಡುತ್ತೇವೆ ಎಂದು ಒಪ್ಪಿಕೊಂಡಿದೆ ಎಂದು ದಯವಿಟ್ಟು ಸರ್ಕಾರದ ಪರವಾಗಿ ನಾವು ಕೈ ಮುಗಿಯುತ್ತೇವೆ, ಉಪವಾಸ ಮುಷ್ಕರ ವಾಪಸ್ ತೆಗೆದುಕೊಳ್ಳಿ ಎಂದು ನಾವು ಹೇಳಲು ಸಾಧ್ಯವಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಮಂತ್ರಿಗಳು ಉತ್ತರ ಸಾಕಷ್ಟು ಕೊಟ್ಟಿದ್ದಾರೆ

ಶ್ರೀ ಕರಿಯಣ್ಣ:- ಸಂಬಳ ಕೊಡಿ. ನಿವೃತ್ತಿ ಟೀಚರ್ ಅನ್ನು ತೆಗೆದುಕೊಂಡರೆ 1500 ರೂಪಾಯಿ ಕೊಡುತ್ತೀರಿ ಆದರೆ ಈ ಗೌರವ ಶಿಕ್ಷಕರಿಗೆ 300 ರೂಪಾಯಿ ಕೊಡುತ್ತೇವೆ ಎಂದರೆ ಯಾವ ಧರ್ಮ? ಸಂಬಳವನ್ನಾದರೂ ಜಾಸ್ತಿ ಕೊಡುವ ಹಾಗೆ ಮಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಉಪವಾಸವನ್ನು ಅವರು ನಿಲ್ಲಿಸುವುದಕ್ಕೆ ದಯವಿಟ್ಟು ಸರ್ಕಾರದಿಂದ ಮನವಿ ಮಾಡಿಕೊಳ್ಳಿ ಈವತ್ತು ಅವರು ಉಪವಾಸ ಕುಳಿತುಕೊಂಡು ಸಾಯುತ್ತಿದ್ದಾರೆ. ಪ್ರತಿದಿನ ಆಸ್ಪತ್ರೆಗೆ ಹೋಗಿ ಬೀಳುತ್ತಿದ್ದಾರೆ. ಸರ್ಕಾರದಿಂದ ಮನವಿ ಮಾಡಿಕೊಳ್ಳಿ. ನಿಮ್ಮ ಬಗ್ಗೆ ನಾವು ಗಮನಕೊಟ್ಟಿದ್ದೇವೆ, ಉಪವಾಸವನ್ನು ನಿಲ್ಲಿಸಿ ಎಂದು ಮನವಿ ಮಾಡಿಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ನಾಯಕರೇ, ತಾವು ಏನು ಹೇಳುತ್ತೀರಿ?

ಶ್ರೀ ಆರ್.ಎನ್. ನಾಯಕ್:- ನನಗೆ ಅಲೋ ಮಾಡಿ.

ಶ್ರೀ ಕೆ.ಎಸ್ ಈಶ್ವರಪ್ಪ (ತಮ್ಮ ಸ್ವಸ್ಥಾನ ಬಿಟ್ಟು ಮಾತನಾಡಿಕೊಂಡು ಭಾವಿಯ ಹತ್ತಿರ ಬಂದರು): ಅವರ ನೇಮಕಾತಿ ಪ್ರಾಮಾಣಿಕವಾಗಿ ಆಗಿದೆ. ಟಿಸಿಹೆಚ್ ಮಾಡಿದ್ದಾರೆ. ಸರ್ಕಾರದಿಂದ ಮನವಿ ಮಾಡಿಕೊಳ್ಳಿ..

(ಗೊಂದಲ)

ಶ್ರೀ ಆರ್ ಎನ್ ನಾಯಕ್:- ಮಾನ್ಯ ಅಧ್ಯಕ್ಷರು ನನ್ನನ್ನು ಕರೆದಿದ್ದಾರೆ.

ಉಪಾಧ್ಯಕ್ಷರು:- ಸ್ವಾಮಿರಾವ್ ರವರೇ ಕುಳಿತುಕೊಳ್ಳಿ. ನಾಯಕ್‌ರವರೇ ನೀವು ಹೇಳಿ.

ಶ್ರೀ ಆರ್.ಎನ್. ನಾಯಕ್:- ಮಾನ್ಯ ಅಧ್ಯಕ್ಷರೇ, ತಾವು ನನ್ನನ್ನು ಕರೆದಿದ್ದೀರಿ. ಅವರನ್ನು ಕೂರಿಸಿ, ಇಲ್ಲದಿದ್ದರೆ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಕರಿಯಣ್ಣ:- ಮಾನ್ಯ ಸಚಿವರು ಸಂಬಳದ ಬಗ್ಗೆ ಹೇಳಲಿಲ್ಲ.

ಉಪಾಧ್ಯಕ್ಷರು:- ಹೇಳಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್ ಈಶ್ವರಪ್ಪ:- ಗಮನ ಸೆಳೆಯುವ ಸೂಚನೆಗೆ ಎಲ್ಲರಿಗೂ ಅವಕಾಶ ಕೊಡುತ್ತೀರಾ? ನಾವು ಮೂರ್ನಾಲ್ಕು ಜನ ಗಮನ ಸೆಳೆಯುವ ಸೂಚನೆಗೆ ಸಹಿ ಮಾಡಿದ್ದೇವೆ. ಎಲ್ಲರಿಗೂ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ ಎಂದು ಕೇಳುತ್ತಿದ್ದೇನೆ.

ಉಪಾಧ್ಯಕ್ಷರು:- ಚರ್ಚೆ ಮಾಡುವುದಕ್ಕೆ ಅವಕಾಶವನ್ನು ನಾನು ಕೊಡುತ್ತಿಲ್ಲ.

ಶ್ರೀ ಆರ್ ಎನ್ ನಾಯಕ್:- ಅಧ್ಯಕ್ಷರೇ, ತಾವು ನನ್ನನ್ನು ಕರೆದಿದ್ದೀರಿ. ಬೇರೆಯವರು ಕುಳಿತುಕೊಳ್ಳಲಿ.

ಶ್ರೀ ಬಿ.ಸ್ವಾಮಿರಾವ್:- ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಏನಾದರೂ ಇದರ ಬಗ್ಗೆ ಹೇಳಲಿ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಈಶ್ವರಪ್ಪನವರು ಹಾಗೂ ಇತರರು ಮಂಡಿಸಿದಂತಹ ಗಮನ ಸೆಳೆಯುವ ಸೂಚನೆಗೆ ಮಾನ್ಯ ಸಚಿವರು ಸಾಕಷ್ಟು ಉತ್ತರವನ್ನು ಕೊಟ್ಟಿದ್ದಾರೆ. ಆದರ ಪ್ರಕಾರ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಕೆ.ಎಸ್ ಈಶ್ವರಪ್ಪ: (ತಮ್ಮ ಸ್ಥಾನ ಬಿಟ್ಟು): ಏನು ಉತ್ತರ ಕೊಟ್ಟಿದ್ದಾರೆ?

(ಗೊಂದಲ)

ಉಪಾಧ್ಯಕ್ಷರು:- ಸಾಕಷ್ಟು ಉತ್ತರ ಕೊಟ್ಟಿದ್ದಾರೆ. ದಯವಿಟ್ಟು ನಿಮ್ಮ ಸ್ಥಾನದಲ್ಲಿ ಹೋಗಿ ಕುಳಿತುಕೊಳ್ಳಿ. ಉತ್ತರ ಕೊಡಿಸೋಣ.

ಶ್ರೀ ಕೆ.ಎಸ್ ಈಶ್ವರಪ್ಪ:ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಆಶ್ವಾಸನೆ ಕೊಡಲಿ

ಉಪಾಧ್ಯಕ್ಷರು:- ಉತ್ತರ ಕೊಟ್ಟಿದ್ದಾರೆ. ನಿಮ್ಮ ಆಸನದಲ್ಲಿ ಹೋಗಿ ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಆಶ್ವಾಸನೆ ಕೊಡದೇ ಇದ್ದರೆ ನಾನು ಧರಣಿ ಕುಳಿತು ಕೊಳ್ಳುತ್ತೇನೆ.

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್:- ಪರಿಸ್ಥಿತಿ ತುಂಬಾ ಗಂಭೀರವಾಗಿದೆ. ಅಲ್ಲಿ ಉಪಾಧ್ಯಾಯರುಗಳು ಉಪವಾಸದಿಂದ ಪ್ರಾಣ ಬಿಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಸದನದಲ್ಲಿದ್ದಾರೆ. ಆದ್ದರಿಂದ ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ಇಲ್ಲದಿದ್ದರೆ ನಾವೂ ಸಹ ಧರಣಿಕ್ಕೆ ಹೋಗುತ್ತೇವೆ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ವಾಟಾಳ್ ನಾಗರಾಜ್ ಅವರೇ, ಮಾನ್ಯ ಮುಖ್ಯ ಮಂತ್ರಿಗಳು ಇಲ್ಲೇ ಇದ್ದಾರೆ ಅವರಿಗೆ ಹೇಳುತ್ತಿದ್ದೇನೆ. ಅವರು ಏನು ಉತ್ತರ ಕೊಡುತ್ತಾರೋ ನೋಡೋಣ. ಮಾನ್ಯ ಮುಖ್ಯಮಂತ್ರಿಗಳನ್ನು ಕರೆಯುತ್ತಿದ್ದೇನೆ ದಯಮಾಡಿ ತಾವು ತಮ್ಮ ಆಸನದಲ್ಲಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ:- ಶಿಕ್ಷಣ ಇಲಾಖೆಯಲ್ಲಿ ಯಾವ್ಯಾವ ಸಮಸ್ಯೆಗಳಿವೆಯೆಂದು ಮಾನ್ಯಮುಖ್ಯಮಂತ್ರಿಗಳಿಗೆ ಗೊತ್ತಿರದ ವಿಚಾರವೇನಲ್ಲ. ಇವೊತ್ತು ಗಂಭೀರವಾದ ಸಮಸ್ಯೆ ಉದ್ಭವವಾಗಿದ್ದು, ಗೌರವಧನ ಪಡೆಯುತ್ತಿರುವ ಶಿಕ್ಷಕರು ಅಮರಣಾಂತ ಉಪವಾಸ ಕುಳಿತಿದ್ದಾರೆ. ಆದುದರಿಂದ ಅವರ ಸಮಸ್ಯೆಗಳನ್ನು ಬಗೆಹರಿಸಿ ಉಪವಾಸ ಕುಳಿತಿರುವವರನ್ನು ಉಪವಾಸದಿಂದ ಕೈಬಿಡುವಂತೆ ಸರ್ಕಾರ ಪ್ರಯತ್ನ ಮಾಡುವ ಸೌಜನ್ಯವಾದರೂ ತೋರಿಸಬೇಕಲ್ಲವೇ?

ಶ್ರೀ ವಾಟಾಳ್ ನಾಗರಾಜ್:- ಸಮಸ್ಯೆ ಬಗೆಹರಿಸುವುದಷ್ಟೇ ಅಲ್ಲ, ಅವರಿಗೆ ಪರಿಹಾರವನ್ನೂ ಸಹ ಕೊಡಬೇಕು.

ಉಪಾಧ್ಯಕ್ಷರು:- ಮಾನ್ಯ ಮುಖ್ಯಮಂತ್ರಿಗಳು ಈಗ ಹೇಳಿಕೆ ಕೊಡುತ್ತಾರೆ. ತಾವು ಕುಳಿತುಕೊಳ್ಳಿ.

ಶ್ರೀ ಕರಿಯಣ್ಣ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಕರ್ನಾಟಕ ರಾಜ್ಯದಲ್ಲಿ 3000ಕ್ಕೂ ಹೆಚ್ಚು ಮಂದಿ ಶಿಕ್ಷಕರನ್ನು 300 ರೂಪಾಯಿಗಳಿಂದ 500 ರೂಪಾಯಿಗಳವರೆಗಿನ ಗೌರವಧನದ ಆಧಾರದ ಮೇಲೆ ನೇಮಕ ಮಾಡಿಕೊಂಡಿದ್ದು, ಆ ರೀತಿ ನೇಮಕ ಮಾಡಿಕೊಂಡ 5 ವರ್ಷಗಳಲ್ಲಿ ಸರ್ಕಾರದ ನೀತಿಯಿಂದಾಗಿ ಅದರಲ್ಲಿ ಕೆಲವರಿಗೆ ಈಗ ಖಾಯಂ ಉದ್ಯೋಗ ಸಿಕ್ಕಿದೆ. ಉಳಿದ 2000 ಮಂದಿಗೆ ಖಾಯಂ ಉದ್ಯೋಗ ಸಿಕ್ಕಿಲ್ಲ. ಇದರಿಂದಾಗಿ ಇಡೀ ರಾಜ್ಯಾದ್ಯಂತ ಗೌರವಧನ ಪಡೆಯುತ್ತಿರುವ ಶಿಕ್ಷಕರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ನನ್ನ ಜಿಲ್ಲೆಯಾದ ಶಿವಮೊಗ್ಗದಲ್ಲಿ 217 ಮಂದಿ ಉಪವಾಸ ಸತ್ಯಾಗ್ರಹ ಕುಳಿತಿದ್ದಾರೆ. ಈಗ ಏನಾಗಿದೆಯೆಂದರೆ, ಮೊನ್ನೆ ದಿವಸ ತಾವು ಶಿಕ್ಷಣ ನೀತಿಯನ್ನು ಪ್ರಕಟಿಸಿದಿರಿ. ಏನೆಂದರೆ, ಎಲ್ಲೆಲ್ಲಿ ಉಪಾಧ್ಯಾಯರ ಹುದ್ದೆ ಕೊರತೆಯಿದೆಯೋ ಅಲ್ಲಿಗೆ ನಿವೃತ್ತರಾದಂಥ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಂಡು ಅವರಿಗೆ ತಿಂಗಳಿಗೆ 1500 ರೂಪಾಯಿಗಳಿಂದ 1800 ರೂಪಾಯಿಗಳವರೆಗೆ ಸಂಬಳ ಕೊಡುತ್ತೇವೆಂದು ಹೇಳಿದಿರಿ. ಈಗ ಐದು ವರ್ಷಗಳಿಂದ ತಿಂಗಳಿಗೆ 300 ರೂಪಾಯಿಗಳಿಂದ 500 ರೂಪಾಯಿಗಳವರೆಗೆ ಗೌರವಧನ ಪಡೆದುಕೊಂಡು ಕೆಲಸ ಮಾಡುತ್ತಿರುವ ಸುಮಾರು 2000 ಜನರಿದ್ದಾರೆ. ಈಗತಾನೇ ಶಿಕ್ಷಣ ಮಂತ್ರಿಗಳು ಈ ಕುರಿತು ಹೈಕೋರ್ಟ್ ಆದೇಶವಿರುವುದರಿಂದ ಅವರನ್ನು ಕೆಲಸದಿಂದ ತೆಗೆಯುವುದಕ್ಕಾಗುವುದಿಲ್ಲವೆಂದು ಹೇಳಿದರು. ಅವರನ್ನು . ತೆಗೆಯುವುದಕ್ಕೆ ಆಗದೆಹೋದರೆ ರೋಸ್ಟರ್ ಸಿಸ್ಟಮ್ ಪ್ರಕಾರ ನೇಮಕಾತಿ ಮಾಡಿಕೊಳ್ಳುವುದಾದರೆ ಅಲ್ಲಿಯವರೆಗೆ ಅವರನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡು ಸಂಬಳ ಹೆಚ್ಚು ಮಾಡಿ ಎಂದು ನಾವು ಕೇಳುತ್ತಿದ್ದೇವೆ. ಒಂದು, ಸಂಬಳ ಹೆಚ್ಚು ಮಾಡಬೇಕು ಇಲ್ಲವೆಂದರೆ 2000 ಮಂದಿ ಗೌರವಧನ ಪಡೆಯುತ್ತಿರುವವರನ್ನು ಒಂದೇ ಕಂತಿನಲ್ಲಿ ಖಾಯಂಗೊಳಿಸಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ(ಮುಖ್ಯಮಂತ್ರಿಗಳು):- ಸನ್ಮಾನ್ಯ ಉಪಾಧ್ಯಕ್ಷರೇ, ಈಗತಾನೆ ಮಾನ್ಯ ಸದಸ್ಯರುಗಳಾದ ಶ್ರೀ ಈಶ್ವರಪ್ಪ ಶ್ರೀ ವಾಟಾಳ್ ನಾಗರಾಜ್, ವಿರೋಧ ಪಕ್ಷದ ನಾಯಕರು, ಕರಿಯಣ್ಣನವರು, ಆರ್.ಎನ್ ನಾಯಕ್‌ರವರು ಹಾಗೂ ಸ್ವಾಮಿರಾವ್‌ರವರು ಗೌರವಧನ ಪಡೆಯುತ್ತಿರುವ ಶಿಕ್ಷಕರ ಕುರಿತು ಪ್ರಸ್ತಾಪಿಸಿದರು. ಕೆಲವು ವರ್ಷಗಳ ಹಿಂದೆ ಜಿಲ್ಲಾ ಪರಿಷತ್‌ನವರು ಗೌರವ ಶಿಕ್ಷಕರನ್ನು ಏನು ನೇಮಕ ಮಾಡಿದ್ದಾರೆ, ಅವರನ್ನು ಖಾಯಂಗೊಳಿಸುವುದಕ್ಕೆ ಅವರಿಗೆ ಕೆಲವು ವೈಟೇಜ್ ಅಂದರೆ 0.5 ಮಾರ್ಕ್ಸ್ ಕೊಡುತ್ತಿದ್ದೇವೆ. ಇದೇನೂ ಸಾಕಾಗುವುದಿಲ್ಲವೆಂದು ವರ್ಷೇವರ್ಷ 2 ಮಾರ್ಕ್ಸ್ ಅನ್ನು ಏಕೆ ನಾವು ಸೇರಿಸಬಾರದೆಂದು ಯೋಚಿಸಿ ವೈಟೇಜ್ ಅನ್ನು ಜಾಸ್ತಿ ಕೊಟ್ಟಾಗ ಬಹುಶಃ ಹೆಚ್ಚು ಜನರನ್ನು ಖಾಯಂಗೊಳಿಸುವುದಕ್ಕೆ ಸಾಧ್ಯ ಎನ್ನುವ ವಿಚಾರವನ್ನು ಕ್ಯಾಬಿನೆಟ್ ಮುಂದೆ ತರುತ್ತಿದ್ದೇವೆ. ಅವರಿಗೆ ಬೇರೆ ಅರ್ಹತೆಗಳಿದ್ದರೂ ಕೂಡ ಅವರನ್ನು ಖಾಯಂ ಗೊಳಿಸಬೇಕೆಂಬ ನಮ್ಮ ಉದ್ದೇಶವೂ ಕೂಡ ಇದೆ, ಅವರನ್ನು ಮನೆಗೆ ಕಳುಹಿಸುವ ಉದ್ದೇಶ ಖಂಡಿತ ನಮಗಿಲ್ಲ. ಪ್ರತಿ ವರ್ಷ 2 ಮಾರ್ಕ್ಸ್ ಸೇರಿಸಿ ವೈಟೇಜ್ ಜಾಸ್ತಿ ಮಾಡುವ ದಿಸೆಯತ್ತ ಆಲೋಚಿಸುತ್ತಿದ್ದೇವೆ. ಸರ್ಕಾರದ ಮೊದಲನೆಯ ಸೂಚನೆ ಪ್ರಕಾರ ಅನೇಕ ಜನರು ಖಾಯಂ ಆಗಿದ್ದಾರೆ, ಖಾಯಂ ಆಗದಿರುವವರು 2000 ಮಂದಿ ಇದ್ದಾರೆ. ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿಯ ಗೌರವಧನವನ್ನು ಕೊಡಲಾಗುತ್ತಿದೆ. ಕೆಲವು ಜಿಲ್ಲೆಗಳಲ್ಲಿ 200-300 ರೂಪಾಯಿಗಳಿದ್ದರೆ ಇನ್ನು ಕೆಲವು ಜಿಲ್ಲೆಗಳಲ್ಲಿ 500 ರೂಪಾಯಿಗಳ ಗೌರವಧನ ಕೊಡಲಾಗುತ್ತಿದೆ. ಈಗ ತಾವು ಪ್ರಸ್ತಾಪಿಸಿ, ನಿವೃತ್ತ ಶಿಕ್ಷಕರಿಗೆ ಹೆಚ್ಚು ಸಂಬಳ ಕೊಡುವ ಪ್ರಯತ್ನ ಮಾಡಿದ್ದು, ಯುವಕರನ್ನು ತೆಗೆದುಕೊಂಡು ಅವರಿಗೆ ಏಕೆ ಕೊಡುವುದಿಲ್ಲವೆಂದು ಹೇಳಿದ್ದೀರಿ. ಯುವಕರನ್ನು ತೆಗೆದುಕೊಳ್ಳಬೇಕೆಂಬ ಆಸಕ್ತಿ ನಮಗೆ ಖಂಡಿತಾ ಇದೆ. ನಿಜವಾಗಿ ತಾವು ಇದನ್ನು ತಿಳಿದುಕೊಳ್ಳಬೇಕು. ಅನೇಕ ವರ್ಷಗಳಿಂದ ಈ ಶಿಕ್ಷಕರ ಹುದ್ದೆ ಬಾಕಿ ಉಳಿದಿತ್ತು.

5.35 ಪಿ.ಎಂ

ಅದು ಏಡೆಡ್ ಶಾಲೆಗಳು ಇರಬಹುದು, ಸರ್ಕಾರದ ಶಾಲೆಗಳು ಇರಬಹುದು, ನಾವು ಎಲ್ಲವನ್ನೂ ರಿಲ್ಯಾಕ್ಸ್ ಮಾಡಿದ್ದೇವೆ. ಯಾವ ಶಾಲೆಗಳಲ್ಲಿ ಹುದ್ದೆಗಳು ಖಾಲಿ ಬಿದ್ದಿದೆ ಅಲ್ಲಿ ಎಲ್ಲವನ್ನೂ ರಿಲ್ಯಾಕ್ಸ್ ಮಾಡಿದ್ದೇವೆ. ಏಕೆಂದರೆ ಅಧ್ಯಾಪಕರನ್ನು ಒದಗಿಸದಿದ್ದರೆ ನಾವು ಮುಂದಿನ ಜನಾಂಗವನ್ನು ಯಾವುದೇ ರೀತಿಯಿಂದಲೂ ಮೇಲಕ್ಕೆ ತರಲು ಹಾಗೂ ಬೆಳೆಸಲು ಸಾಧ್ಯವಾಗುವುದಿಲ್ಲ. ಈ ಉದ್ದೇಶದಿಂದ ನಾವು ಎಲ್ಲಾ ಖಾಲಿ ಇರುವ ಉಪಾಧ್ಯಾಯರ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಹೇಳಿದ್ದೇವೆ. ಆದರೆ ಆ ರೀತಿ ನೇಮಕ ಮಾಡಿಕೊಳ್ಳಬೇಕಾದರೆ ನೀತಿ ನಿಯಮಗಳು ಇದೆ ಎಂಬುದು ತಮಗೆಲ್ಲರಿಗೂ ಸಹ ಗೊತ್ತಿರತಕ್ಕ ವಿಚಾರ. ನಾವು ಅಡ್ಡಾ ದಿಡ್ಡಿ ನೇಮಕ ಮಾಡಿದರೆ ರೋಸ್ಟರ್ ಪದ್ಧತಿಯು ನಾಶವಾಗಿಬಿಡುತ್ತದೆ. ಆಗ ಮತ್ತೆ ಒಂದು ರೀತಿಯಾದ ಗಣಪತಿಯ ಮದುವೆ ಮಾಡಿದಂತೆ ಆಗುತ್ತದೆ. ರೋಸ್ಟರ್ ಪದ್ಧತಿಯು ಅನೇಕ ವರ್ಷಗಳಿಂದ, ದಶಕಗಳಿಂದ ಮುಂದಕ್ಕೆ ಹೋಗುತ್ತಲೇ ಇದೆ, ನಾವು ತಾತ್ಕಾಲಿಕವಾಗಿ ಏನೋ ಒಂದು ಪದ್ಧತಿಯನ್ನು ಮಾಡಿಕೊಂಡು ಹುದ್ದೆಗಳನ್ನು ಭರ್ತಿ ಮಾಡಿಕೊಂಡರೆ ರೋಸ್ಟರ್ ಪದ್ದತಿಯು ಇದಕ್ಕೆ ಬಲಿಯಾಗಿಬಿಡುತ್ತದೆ. ಇನ್ನು ಮುಂದೆ ರೋಸ್ಟರ್ ಪದ್ದತಿಯು ಇದಕ್ಕೆ ಬಲಿಯಾಗಬಾರದು. ರೋಸ್ಟರ್ ಪದ್ಧತಿಯು ಯಾವ ಹಂತದಲ್ಲಿಯೂ ಕೂಡ ಬಲಿಯಾಗಬಾರದು ಎನ್ನತಕ್ಕ ಉದ್ದೆಶದಿಂದ ನಾವು ನೇಮ ಕಾತಿಯನ್ನು ಬಹಳ ಯಶಸ್ವಿಯಾಗಿ

ಮಾಡುತ್ತಿದ್ದೇವೆ. ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಇದು ನಮ್ಮ ಪ್ರಾಮಾಣಿಕವಾದಂಥ ಸರ್ಕಾರದ ಉದ್ದೇಶ. ತಾವು ಹೇಳಿದಂತೆ ಗೌರವ ಶಿಕ್ಷಕರನ್ನು ಗೌರವ ಧನದ ಆಧಾರದಮೇಲೆ ನೇಮಕ ಮಾಡುವುದರಿಂದ, ತಾತ್ಕಾಲಿಕ ಶಿಕ್ಷಕರನ್ನು ನೇಮಕ ಮಾಡುವುದರಿಂದ ರೋಸ್ಟರ್ ಪದ್ಧತಿಯನ್ನು ಅನುಸರಿಸಿಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಅದನ್ನು ಮೈನ್‌ಟೇನ್ ಮಾಡುವುದಕ್ಕಾಗುವುದಿಲ್ಲ. ಖಾಯಂ ಆಗಿ ನೇಮಕ ಮಾಡತಕ್ಕ ಪ್ರಕ್ರಿಯೆಯು ಮುಗಿಯಲು 5-6 ತಿಂಗಳು ಇಲ್ಲವೇ ಒಂದು ವರ್ಷವಾಗಬಹುದು. ಈ ಮಧ್ಯದಲ್ಲಿ ನಿವೃತ್ತಿ ಶಿಕ್ಷಕರನ್ನು ನೇಮಕ ಮಾಡಿದರೆ ಅದು ಪ್ರಾಥಮಿಕ ಮಟ್ಟದಲ್ಲಿ ಇರಬಹುದು, ಜೂನಿಯರ್ ಕಾಲೇಜುಗಳ ಮಟ್ಟದಲ್ಲಿ ಇರಬಹುದು ಅಥವಾ ಪ್ರೌಢಶಾಲಾ ಮಟ್ಟದಲ್ಲಿ ಇರಬಹುದು, ಕಡೆಯ ಪಕ್ಷ ಅನುಭವಿಕ ಶಿಕ್ಷಕರು ಬಂದರೆ ಹುಡುಗರಿಗೆ ಅನುಕೂಲವಾಗುತ್ತದೆ. ಕೆಲವು ಕಡೆಗಳಲ್ಲಿ ಫಲಿತಾಂಶವು ಸೊನ್ನೆ ಬಂದಿದೆ. ಏಕೆಂದರೆ ಅಲ್ಲಿ ಸೈನ್ಸ್ ಶಿಕ್ಷಕರು ಇಲ್ಲ, ತಮಗೆ ಗೊತ್ತಿರುವ ಹಾಗೆ ಈಗ ಏನಾದರೂ ಯುವಕರನ್ನು ನೇಮಕ ಮಾಡಿಕೊಂಡರೆ ಅವರುಗಳು ನಮ್ಮನ್ನೇ ಖಾಯಂ ಮಾಡಿ ಎಂದು ಮುಂದೆ ಕಬ್ಬನ್ ಪಾರ್ಕ್‌ನಲ್ಲಿ ಕುಳಿತುಕೊಂಡೇ ಬಿಡುತ್ತಾರೆ. ಆದುದರಿಂದ ತಾತ್ಕಾಲಿಕವಾಗಿ ನಿವೃತ್ತಿಯಾಗಿರುವ ಶಿಕ್ಷಕರನ್ನು ನೇಮಕ ಮಾಡಿಕೊಂಡರೆ ಒಳ್ಳೆಯದು. ನಿಜವಾಗಿ ಹೇಳಬೇಕೆಂದರೆ ಇದರಿಂದ ಶೈಕ್ಷಣಿಕ ಮಟ್ಟವೂ ಸಹ ಹೆಚ್ಚಾಗುತ್ತದೆ. ಇದರಿಂದ ಯುವಕರಿಗೆ ವೇದನೆಯಾಗಬಹುದು, ಆದರೆ ಯುವಕರ ಹುದ್ದೆಗಳನ್ನು ಅಪಹರಿಸಿ ಇವನ್ನು ಮಾಡುತ್ತಿಲ್ಲ. ಅದರೂ ಕೂಡ ಜನರು ಏನೋ ಮಾಡುವ ಬದಲಾಗಿ ಏನನ್ನೋ ಮಾಡುತ್ತಾರೆಂದು ಹೇಳುತ್ತಿದ್ದರು ಅದಕ್ಕಾಗಿ alright, we have conceded. By that we have sacrificed the interest of the students. That you should not forget. ನಾವು ಏನು ಮಾಡುತ್ತೇವೆಂದರೆ we always go by populism. ತಾವು ನಿವೃತ್ತಿಯಾದ ಶಿಕ್ಷಕರನ್ನು ಏಕೆ ನೇಮಕ ಮಾಡುತ್ತೀರಿ? ಯುವಕರನ್ನೇ ನೇಮಕ ಮಾಡಿಕೊಳ್ಳಿ ಎಂದು ಹೇಳಬಹುದು, ಆದರೆ ನೀವೇ ಯೋಚನೆ ಮಾಡಿ, ನಾವು ಬೇಕಾದರೆ 20 ದಿನಗಳಲ್ಲಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬಹುದು. All vacancies ಗಳನ್ನು ನಾನು ತುಂಬಿಸಬಹುದಿತ್ತು if you have permitted the retired teachers ಆದರೆ ಈಗ ಪರ್ಮಿಟ್ ಆಗಲಿಲ್ಲ. The students will suffer, no doubt. ಆದರೆ ಓಕಲ್ ಆಗಿ ಬಹಳ ಧ್ವನಿಯನ್ನು ಏರಿಸಿ ಮಾತನಾಡುತ್ತಾರಲ್ಲಾ ಅವರ ಕಡೆಗೆ as politicians, we go. It is alright. We have conceded to that. ಆದರ ಬಗ್ಗೆ ನಮಗೆ ಪಶ್ಚಾತ್ತಾಪವಾದರೂ ಕೂಡ ವಿಧಿ ಇಲ್ಲದೆ ಒಪ್ಪಿಕೊಂಡಿದ್ದೇವೆ. ಅಲ್ಲಿ ಪ್ರಶ್ನೆಯು ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ರೀತಿಯಾದ ವೇತನವನ್ನು,ಗೌರವ ಧನವನ್ನು ಕೊಡುತ್ತಿದ್ದಾರೆ ಅದನ್ನು ಸರಿಪಡಿಸಬೇಕು ಎಂಬುದಕ್ಕೆ ಸೀಮಿತವಾಗುತ್ತದೆ. ನಾವು ಅವರುಗಳ ಗೌರವ ಧನವನ್ನು ಸ್ವಲ್ಪ ಜಾಸ್ತಿ ಮಾಡಬೇಕೆಂದಿದ್ದೇವೆ. ಏಕೆಂದರೆ ಅವರಿಂದ ಕೆಲಸವನ್ನು ತೆಗೆದುಕೊಳ್ಳುವಾಗ ಅವರಿಗೆ ಸರಿಯಾದಂಥ; ಗೌರವಧನವನ್ನು ನಾವು ಕೊಡಬೇಕಾಗಿದೆ. ನಾನು ಸನ್ಮಾನ್ಯ ಶಿಕ್ಷಣ ಸಚಿವರಿಗೆ ಇದರ ಬಗ್ಗೆ ಪ್ರಸ್ತಾವನೆಯನ್ನು ಆಲೋಚನೆ ಮಾಡಿಕೊಂಡು ಕಳುಹಿಸಿ ಎಂದು ಈಗಾಗಲೇ ಹೇಳಿದ್ದೇನೆ. ಏಕೆಂದರೆ ಸರ್ಕಾರ ಯಾರ ಹತ್ತಿರವಾದರೂ ದುಡಿಸಿಕೊಂಡು ಅನಂತರ ಅವರಿಗೆ ಕಷ್ಟವನ್ನು ಕೊಡತಕ್ಕಂಥ ಪರಿಪಾಠವನ್ನು ಮಾಡುವುದಿಲ್ಲ. ಆದ್ದರಿಂದ ವೈಟೇಜ್ ಕೊಟ್ಟು ಅದಷ್ಟು ಮಟ್ಟಿಗೆ ಯಾರಿಗೆ ಅರ್ಹತೆ ಇದೆ ಈ ಸಾವಿರ ಮಂದಿಯಲ್ಲಿ, ಅವರನ್ನು ಈ ವರ್ಷದಲ್ಲಿಯೇ ಸಾಧ್ಯವಿದ್ದರೆ ಖಾಯಂ ಹುದ್ದೆಗಳಿಗೆ

ಭರ್ತಿ ಮಾಡತಕ್ಕ ಕಾರ್ಯಕ್ರಮವನ್ನು ಒಂದು ಕಡೆ ತೆಗೆದುಕೊಳ್ಳುತ್ತೇವೆ. ಜೊತೆಗೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥ ಕಾರ್ಯಕ್ರಮವನ್ನೂ ಕೂಡ ಎಲ್ಲಾ ಹಂತದಲ್ಲೂ ತೆಗೆದುಕೊಳ್ಳುತ್ತೇವೆ. ಮತ್ತು ಗೌರವಧನವನ್ನು ಏರಿಸುವ ಪ್ರಸ್ತಾವನೆಯನ್ನು ಅವರು ಕಳುಹಿಸುತ್ತಾರೆ ನಾವು ನ್ಯಾಯವಾದಂಥ ಒಂದು ಏರಿಕೆಯನ್ನು ಮಾಡುತ್ತೇವೆ. ಆದ್ದರಿಂದ ಶಿಕ್ಷಕರನ್ನು ಹಂಗರ್ ಸ್ಟ್ರೈಕ್ ಮಾಡುತ್ತಾ ಹೋದರೆ ವಿದ್ಯಾರ್ಥಿಗಳ ಗತಿ ಏನಾಗಬೇಕು? ನಮ್ಮ ಯಾವುದೇ ಶೈಕ್ಷಣಿಕ ನೀತಿಯ ಕೇಂದ್ರ ಬಿಂದು ಯಾರು? ವಿದ್ಯಾರ್ಥಿ ವಿದ್ಯಾರ್ಥಿನಿಯರು, ಶಿಕ್ಷಕರು ಅಲ್ಲ. ಆದರೆ ನಮ್ಮ ಆದ್ಯತೆಯಲ್ಲಿ ಸ್ವಲ್ಪ ತಿರುಗುಮುರುಗು ಆಗಿ ಬಿಟ್ಟಿದೆ. ಮಾನ್ಯ ಈಶ್ವರಪ್ಪನವರೇ, ತಾವು ಶಿಕ್ಷಕರ ಬಗ್ಗೆಯೂ ಮಾತನಾಡಿ; ಆದರೆ ಮೊದಲು ವಿದ್ಯಾರ್ಥಿಗಳ ಬಗ್ಗೆ ಮಾತನಾಡುವುದನ್ನು ಕಲಿತುಬಿಡೋಣ.

ಶ್ರೀ ಕೆ.ಎಸ್.ಈಶ್ವರಪ್ಪ:- ಶಿಕ್ಷಕರೇ ಇಲ್ಲದಿದ್ದರೆ ಪಾಠಗಳನ್ನು ಹೇಗೆ ಮಾಡುತ್ತಾರೆ?

ಶ್ರೀ ಎಂ. ವೀರಪ್ಪಮೊಯ್ಲಿ:- ಶಿಕ್ಷಣ ರಂಗದಲ್ಲಿ ನಮ್ಮೆಲ್ಲರ ಮುಖ್ಯವಾದ ನೀತಿ ಮತ್ತು ಕೇಂದ್ರ ಬಿಂದು ವಿದ್ಯಾರ್ಥಿಯರಾಗಿರಬೇಕು. ಅವರ ಅಭಿವೃದ್ಧಿಗೆ ಪೂರಕವಾಗಿ ಏನು ಮಾಡಬೇಕೊ ಅದನ್ನು ನಾವು ಮಾಡಬೇಕು. ಇಲ್ಲ ಟೀಚರ್ಸ್ ಅನ್ನು ನಾವು ಕೇಂದ್ರ ಬಿಂದುವಾಗಿ ಮಾಡಿಕೊಂಡು ಅವರ ಅನುಕೂಲಕ್ಕೆ ಮಾತ್ರ ನೋಡಿದರೆ He will become last. ನಮ್ಮ ಅಜೆಂಡಾದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕೊನೆಯವರಾಗುತ್ತಾರೆ. ನಮ್ಮ ಅಜೆಂಡಾದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮೊದಲಾಗಬೇಕು; ನೆಕ್ಸ್ಟ್ ಬೇಕಾದರೆ ಶಿಕ್ಷಕರು ಬರಲಿ; ಆದ್ದರಿಂದ ಈ ದೃಷ್ಟಿ ಕೋನವಿಟ್ಟುಕೊಂಡು ಮಾಡಬೇಕು. ಮಾನ್ಯ ವೈ.ಕೆ.ರಾಮಯ್ಯನವರು ಇದರ ಬಗ್ಗೆ ಒಳ್ಳೆಯ ವ್ಯಾಖ್ಯಾನ ಮಾಡುತ್ತಾರೆ. ಅಧಿಕಾರಿಗಳು , ಶಿಕ್ಷಕರು ಅವರ ಸಮಸ್ಯೆ ಅವರ ಅನುಕೂಲತೆ ನಾವು ಮೊದಲು ನೋಡುವುದು, ಜನರ ಅನುಕೂಲತೆ ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರ ಅನುಕೂಲತೆ ಆಮೇಲೆ ನೋಡುವುದು, ಈ ಪ್ಲೇಟ್ ಸ್ವಲ್ಪ ತಿರುಗುಮುರುಗಾಗಿದೆ. ಆ ಪ್ಲೇಟನ್ನು ಸರಿ ಮಾಡಿ ಬಿಟ್ಟು ಜನರ ಅಭಿವೃದ್ಧಿಯನ್ನು ಸಾಧನೆ ಮಾಡಿದರೆ ನಮ್ಮ ಆಡಳಿತ ಸಂಸ್ಕೃತಿಯಲ್ಲಿಯೇ ಒಂದು ರೀತಿಯ ಯುಗಧರ್ಮ ಪರಿವರ್ತನೆಯಾಗುತ್ತದೆ. ಇದನ್ನೇ ನಾವು ಅಪೇಕ್ಷೆ ಮಾಡುವುದು ಬಯಸುವುದು. ಆದರೆ ಅನೇಕ ಭಾರಿ ನಮ್ಮ ಅಪೇಕ್ಷೆ ಪ್ರಕಾರ ಬಯಸಿದ ಹಾಗೆ ಆಗುವುದಿಲ್ಲ. ವ್ಯವಸ್ಥೆಗೆ ನಾವು ಅಡ್ಜಸ್ಟ್ ಮಾಡಿಕೊಂಡು ಹೋಗುತ್ತೇವೆ. ಆದ್ದರಿಂದ ಸ್ವಲ್ಪ ವ್ಯತ್ಯಾಸವಾಗುತ್ತದೆ. ದಯಮಾಡಿ ಉಪವಾಸ ಮಾಡುತ್ತಿರತಕ್ಕಂತಹ ಶಿಕ್ಷಕರು ಏನು ಇದ್ದಾರೆ ಅವರ ಬಗ್ಗೆ ನೀವಿಲ್ಲಿ ಬರಬೇಕಿಲ್ಲ;ನಿಮ್ಮ ಅನುಕೂಲತೆಗಳೇನೇ ಇದ್ದರೂ ಕೂಡ ಶಿಕ್ಷಕರ ಹಿತದೃಷ್ಟಿಯಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರ ಹಿತದೃಷ್ಟಿಯಿಂದ ನಾವು ನೋಡಿಕೊಳ್ಳುತ್ತೇವೆ; ಆ ಕಳಕಳಿ ನಮಗಿದೆ.

ಶ್ರೀ ವಾಟಾಳ್ ನಾಗರಾಜ್:- ವೇತನವನ್ನು ಜಾಸ್ತಿ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ:- ಆಯಿತು.

ಶ್ರೀಮತಿ ನಾಗಮ್ಮ ಸಿ ಕೇಶಮೂರ್ತಿ:- ಮಾನ್ಯ ಮುಖ್ಯಮಂತ್ರಿಗಳೇನು ಹೇಳಿಕೆ ನೀಡಿದ್ದಾರೆ, ಅದರ ಹಿನ್ನೆಲೆಯಲ್ಲಿ ಉಪವಾಸ ನಡೆಸುತ್ತಿರತಕ್ಕಂತಹ ಎಲ್ಲಾ ಶಿಕ್ಷಕರೂ ಕೂಡ ತಮ್ಮ ಸತ್ಯಾಗ್ರಹವನ್ನು ಹಿಂತೆಗೆದುಕೊಂಡು ಅವರ ಶಾಲೆಗಳಿಗೆ ಹೋಗಿ ಹಾಜರಾತಿಯಾಗಬೇಕೆಂದು ಕಳಕಳಿಯಿಂದ ಸರಕಾರದ ಪರವಾಗಿ ಕೇಳಿಕೊಳ್ಳುತ್ತೇನೆ.

ದ.ಆ ನಿಯಮ 334 ರ ಮೇರೆಗೆ ಪ್ರಸ್ತಾಪಿಸಿದ ವಿಷಯಗಳು